# ಕೋಲಾರ

# ಜಿಲ್ಲಾ ರಂಗಮಾಹಿತಿ

ಡಾ. ಮುನಿನಾರಾಯಣ

ಕರ್ನಾಟಕ ನಾಟಕ ಅಕಾಡೆಮಿ

ಜಿಲ್ಲಾ ರಂಗಮಾಹಿತಿ ಮಾಲಿಕೆ

# ಕೋಲಾರ ಜಿಲ್ಲಾ ರಂಗ ಮಾಹಿತಿ

ಡಾ. ಮುನಿನಾರಾಯಣ

ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – ೦೨

**Kolara Jilla Ranga Mahiti :**
District theatre information written by **Dr. Muninarayana**
Published by **Mr. Siddaraju,** Registrar, Karnataka Nataka Academy, Kannada Bhavana, J.C.Road, Bengaluru- 560002 . Phone: 080-22237484

ಹಕ್ಕುಗಳು : ಕರ್ನಾಟಕ ನಾಟಕ ಅಕಾಡೆಮಿ
ಮೊದಲ ಮುದ್ರಣ : ೨೦೧೬
ಪ್ರತಿಗಳು : ೧,೦೦೦
ಪುಟಗಳು : ೭೬
ಬೆಲೆ : ರೂ. ೬೦/-

**ಪ್ರಕಾಶಕರು**
ಸಿದ್ಧರಾಜು, ರಿಜಿಸ್ಟ್ರಾರ್,
ಕರ್ನಾಟಕ ನಾಟಕ ಅಕಾಡೆಮಿ,
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦೦೦೨
ದೂರವಾಣಿ: ೦೮೦ ೨೨೨೩೭೪೮೪

ಮುಖಪುಟ ವಿನ್ಯಾಸ :
ಕೃಷ್ಣ ರಾಯಚೂರು

ಮುದ್ರಣ :
**ರೀಗಲ್ ಪ್ರಿಂಟ್ ಸರ್ವೀಸ್**
ಬೆಂಗಳೂರು - ೫೬೦ ೦೨೬
ಮೊ. : ೯೯೬೪೩೫೧೬೫೫

# ಪ್ರಧಾನ ಸಂಪಾದಕರ ನುಡಿ

ಕರ್ನಾಟಕ ನಾಟಕ ಅಕಾಡೆಮಿಯ ನಮ್ಮ ಅವಧಿ ಎರಡು ವರ್ಷ ಕಳೆದಿದೆ. ಮೊದಲ ವರ್ಷ ಜಿಲ್ಲೆಗಳಲ್ಲಿ ನಾಟಕೋತ್ಸವ, ಹವ್ಯಾಸಿ ರಂಗ ತಂಡಗಳಿಗೆ ಶಿಬಿರ, ರಸಗ್ರಹಣ, ನಾಟಕ ಕಂಪನಿಗಳಿಗೆ ಹೊಸ ನಾಟಕ ಬರೆಸುವ ಯೋಜನೆ, ಪೌರಾಣಿಕ ರಂಗೋತ್ಸವ, ತಿಂಗಳ ನಾಟಕ, ರಂಗಗೀತೆ ಪ್ರಾತ್ಯಕ್ಷಿಕೆ, ಮುಂಬಯಿಯಲ್ಲಿ ನಾಟಕೋತ್ಸವ ಮುಂತಾದ ಹತ್ತು ಹಲವು ವಿನೂತನ ಕಾರ್ಯಕ್ರಮ ನಡೆಸಿದೆವು.

ವಿಜಯಪುರದಲ್ಲಿ ೨೦೧೫ ಸೆ.೨೬ ರಿಂದ ೩೦ ರ ವರೆಗೆ ನಡೆದ ರಾಜ್ಯ ಕನ್ನಡ ವೃತ್ತಿರಂಗಭೂಮಿ ಸಮ್ಮೇಳನದಲ್ಲಿ ಎಲ್ಲ ಕಂಪನಿಗಳ ಕಲಾವಿದರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಐದು ದಿನಗಳ ಕಾಲ ಹತ್ತು ನಾಟಕ ಕಂಪನಿಗಳಿಗೆ ಏರ್ಪಡಿಸಿದ್ದ ನಾಟಕ ಸ್ಪರ್ಧೆ ರಂಗ ಇತಿಹಾಸದಲ್ಲಿ ಅಪರೂಪದ್ದಾಗಿತ್ತು. ಹಿರಿಯ ಕವಿಗಳಾದ ಬಿ.ಆರ್.ಅರಿಷಿಣಗೋಡಿ ಅವರಿಗೆ ಇಳಕಲ್‌ನಲ್ಲಿ, ಎಲ್.ಬಿ.ಕೆ.ಆಲ್ದಾಳ ಅವರಿಗೆ ಕಲಬುರಗಿಯಲ್ಲಿ ಏರ್ಪಡಿಸಿದ್ದ ಅಭಿನಂದನೆ, ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ ವಿಶೇಷವಾಗಿತ್ತು.

ಹಾವೇರಿ ಜಿಲ್ಲೆಯ ಶೇಷಗಿರಿಯಲ್ಲಿ ೨೧ ದಿನಗಳ ಕಾಲ ರಂಗ ನೇಪಥ್ಯ ಶಿಬಿರ, ರಾಮನಗರದ ಜಾನಪದ ಲೋಕದಲ್ಲಿ ನಡೆದ ಐದು ದಿನಗಳ ನಾಟಕ ರಚನಾ ಶಿಬಿರ, ಶಿರಸಿಯಲ್ಲಿ ನಡೆದ ರಂಗವಿಮರ್ಶಾ ಕಮ್ಮಟ, ದೆಹಲಿಯಲ್ಲಿ ನಡೆದ ವೃತ್ತಿ ಕಂಪನಿ ನಾಟಕೋತ್ಸವ ಕೆಲವು ಮೈಲುಗಲ್ಲುಗಳು. ವಿಶೇಷ ಘಟಕ ಯೋಜನೆಯಡಿ ಬಹುತೇಕ ಜಿಲ್ಲೆಗಳಲ್ಲಿ ರಂಗಶಿಬಿರ, ನಾಟಕ ಪ್ರದರ್ಶನ ನಡೆದಿವೆ. ಫೆಲೋಶಿಪ್ ಯೋಜನೆ ಮುಂದುವರಿದಿದೆ. ಕರ್ನಾಟಕ ನಾಟಕ ಅಕಾಡೆಮಿಯ ಮುಖವಾಣಿ 'ಸಂವಾದ' ಪತ್ರಿಕೆಯನ್ನು ಪುನರಾರಂಭಿಸಿದ್ದೇವೆ.

ಪುಸ್ತಕಗಳ ಪ್ರಕಟನೆ ನಾಟಕ ಅಕಾಡೆಮಿಯ ಮಹಾತ್ವಾಕಾಂಕ್ಷೆಯ ಯೋಜನೆ. ಮೊದಲ ಸರ್ವ ಸದಸ್ಯರ ಸಭೆಯಲ್ಲಿ ಪ್ರಕಟನಾ ಸಮಿತಿ ರಚಿಸಿ ಕಾರ್ಯಪ್ರವೃತ್ತರಾಗಿದ್ದೆವು. ಪುಸ್ತಕಗಳ ಪ್ರಕಟನೆ ಮುಖಾಂತರ ಅಂದು ಕಂಡ ಕನಸು ಇಂದು ನನಸಾಗುತ್ತಿದೆ. ಹಿಂದಿನ ವರ್ಷ ಹಾಗೂ ಈ ವರ್ಷದ ಪ್ರಕಟನಾ ಸಮಿತಿ ಮತ್ತು ಈ ಕನಸು ಸಾಕಾರಗೊಳ್ಳಲು ಶ್ರಮಿಸಿದ ಸದಸ್ಯ ಗುಡಿಹಳ್ಳಿ ನಾಗರಾಜ ಹಾಗೂ ಪುಸ್ತಕ ಬರೆದುಕೊಟ್ಟ ಎಲ್ಲ ಲೇಖಕರಿಗೂ ಕೃತಜ್ಞತೆಗಳು.

ಎಲ್.ಬಿ.ಶೇಖ (ಮಾಸ್ತರ)
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ

# ಜಿಲ್ಲಾ ರಂಗಮಾಹಿತಿ ಮುನ್ನೋಟ

ಕರ್ನಾಟಕ ನಾಟಕ ಅಕಾಡೆಮಿ ಪ್ರಕಟನೆಗೆ ಆದ್ಯತೆ ಇರುವ ಅಕಾಡೆಮಿಯಲ್ಲ, ಇದು ಪ್ರಯೋಗ ಪ್ರಧಾನವಾದುದು. ಆದರೂ ರಂಗಭೂಮಿ ಚಟುವಟಿಕೆ, ಅಧ್ಯಯನಕ್ಕೆ ಪೂರಕವಾಗಬಲ್ಲ ಆಕರಗಳು ಅಕಾಡೆಮಿಯಲ್ಲಿ ದೊರೆಯುವಂತಾಗಬೇಕು ಎಂದು ಈ ಹಿಂದೆ ತಕ್ಕಮಟ್ಟಿನ ಪ್ರಕಟನೆ ಕಾರ್ಯಗಳು ನಡೆದಿವೆ. ಮಧ್ಯೆ ಕ್ಷೀಣಿಸಿದ್ದ ಪ್ರಕಟನಾ ವಿಭಾಗವನ್ನು ಚುರುಕುಗೊಳಿಸಿ ಮತ್ತಷ್ಟು ಪುಸ್ತಕಗಳನ್ನು ಹೊರತರಬೇಕು ಎಂದು ಅಧ್ಯಕ್ಷರಾದ ಎಲ್.ಬಿ.ಶೇಖ ಮಾಸ್ತರ ಅವರ ಅಧ್ಯಕ್ಷತೆಯಲ್ಲಿ 23 ಜುಲೈ 2014 ರಂದು ನಡೆದ ಪ್ರಕಟನಾ ಸಮಿತಿ ಸಭೆಯಲ್ಲಿ ನಿರ್ಧರಿಸಲಾಯಿತು. ಸಮಿತಿ ಸದಸ್ಯರಾದ ಪಿ.ತಿಪ್ಪೇಸ್ವಾಮಿ, ವಿ.ಎನ್.ಅಕ್ಕಿ, ಗುಡಿಹಳ್ಳಿ ನಾಗರಾಜ ಹಾಗೂ ರಿಜಿಸ್ಟ್ರಾರ್ ಸಿದ್ದರಾಜು ಭಾಗವಹಿಸಿದ್ದರು.

ಪ್ರಕಟನೆಗೆ ಇದ್ದ ಬೇಡಿಕೆಗಳು ಹಲವಾರು. ಆದರೆ ಸೀಮಿತ ಅವಕಾಶದಲ್ಲಿ ತೀರಾ ಅಗತ್ಯವಾದ ಪುಸ್ತಕಗಳನ್ನು ಮಾತ್ರ ಪ್ರಕಟಿಸಲು ಸಾಧ್ಯವಿತ್ತು. ಕನ್ನಡ ರಂಗಭೂಮಿಗೆ ಅಸಾಧಾರಣ ಕೊಡುಗೆ ನೀಡಿದ ಪ್ರತಿಭಾವಂತರ ಕುರಿತ ಪುಸ್ತಕಗಳನ್ನು ಹೊರತರುವ 'ರಂಗಸಂಪನ್ನರು' ಮಾಲಿಕೆಯನ್ನು ಸಿಜಿಕೆಯವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಆರಂಭಿಸಿ ಕೆಲವು ಪುಸ್ತಕಗಳನ್ನು ಹೊರತರಲಾಗಿತ್ತು. ನಂತರದ ಅವಧಿಯಲ್ಲೂ ಕೆಲವು ಪುಸ್ತಕಗಳು ಹೊರಬಂದವು. ಆ ಮಾಲಿಕೆಯನ್ನು ಮುಂದುವರಿಸಲು ತೀರ್ಮಾನಿಸಿದೆವು.

ಬಿ.ವಿ.ರಾಜಾರಾಂ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಪ್ರತಿ ಜಿಲ್ಲೆಯ ರಂಗಮಾಹಿತಿ ಹೊರತರುವ ಯೋಜನೆ ರೂಪಿಸಿ ಸದಸ್ಯರಿಗೇ ಆ ಹೊಣೆ ವಹಿಸಲಾಗಿತ್ತು. 5–6 ಜಿಲ್ಲೆಗಳ ರಂಗಮಾಹಿತಿ ಬರಹವೂ ಪೂರ್ಣಗೊಂಡಿತ್ತು. ಆದರೆ ಪುಸ್ತಕಗಳು ಪ್ರಕಟನೆಯಾಗಲಿಲ್ಲ. ಉಳಿದಿರುವ ಇತರ ಜಿಲ್ಲೆಗಳನ್ನೂ ಸೇರಿಸಿಕೊಂಡು ಜಿಲ್ಲೆಗೊಂದು ರಂಗಮಾಹಿತಿ ಪುಸ್ತಕಗಳನ್ನು ಹೊರತರುವ ಯೋಜನೆ ಹಮ್ಮಿಕೊಂಡೆವು. ಆಯಾ ಜಿಲ್ಲೆಗಳ ರಂಗ ಚಟುವಟಿಕೆಯಲ್ಲಿ ಪಾಲ್ಗೊಂಡ ಲೇಖಕರಿಗೆ ಈ ಕೆಲಸವನ್ನು ಒಪ್ಪಿಸಿದೆವು. ಜಿಲ್ಲಾ ರಂಗಮಾಹಿತಿ ಕಲೆಹಾಕುವುದು ಗುರುತರ ಕೆಲಸ. ದಾಖಲೆಗಳು ಸರಿಯಾಗಿ ಲಭ್ಯವಿಲ್ಲದ ಕಾರಣ ಲೇಖಕರು ತಮ್ಮ ಶಕ್ತ್ಯಾನುಸಾರ ಸಂಗ್ರಹಿಸಿ ಬರೆದಿದ್ದಾರೆ. ಆದ್ದರಿಂದ ಇದನ್ನು ಯಾರೂ ಸಂಪೂರ್ಣ ಮಾಹಿತಿ ಎಂದು ಭಾವಿಸಬಾರದು. ಇದೊಂದು ಆರಂಭ. ಇದನ್ನು ಮುಂದುವರಿಸಲು ಸಂಘ ಸಂಸ್ಥೆ, ವಿಶ್ವವಿದ್ಯಾಲಯಗಳಿಗೆ ಅವಕಾಶವಿದೆ.

ರಂಗಸಂಪನ್ನರು ಮಾಲಿಕೆಗೆ ಪುಸ್ತಕ ಬರೆಯಲು ಕಲಾವಿದರ ಬಳಿ ಕುಳಿತಾಗಲೂ

ಲೇಖಕರಿಗೆ ಮಾಹಿತಿ ಹಾಗೂ ಚಿತ್ರಗಳ ಕೊರತೆ ಕಾಡಿದೆ. ಆದರೂ ತಾವು ಕಣ್ಣಾರೆ ಕಂಡಿದ್ದ ಕಲಾವಿದರ ಪ್ರತಿಭಾ ಸಂಪನ್ನತೆಯನ್ನು ಆಪ್ತವಾಗಿ ಚಿತ್ರಿಸಿಕೊಟ್ಟಿದ್ದಾರೆ.

2015ರಲ್ಲಿ ಪ್ರಕಟನಾ ಸಮಿತಿ ಬದಲಾದಾಗಲೂ ಈ ಮಾಲಿಕೆಗಳ ಪುಸ್ತಕಗಳನ್ನು ಸಂಪಾದಿಸುವ ಹೊಣೆಯನ್ನು ನನಗೇ ವಹಿಸಲಾಯಿತು. ಸದಸ್ಯರು ಇಟ್ಟ ವಿಶ್ವಾಸ ಹಾಗೂ ಅಧ್ಯಕ್ಷರಾದ ಶ್ರೀ ಶೇಖ್ ಮಾಸ್ತರ್ ಅವರು ಪುಸ್ತಕದ ಕೆಲಸ ಎಲ್ಲಿಗೆ ಬಂತು ಎಂದು ಸದಾ ನೆನಪಿಸುತ್ತ, ಈ ಪ್ರಕಟನೆಗಳ ಕುರಿತು ತಾಳಿದ ಆಸಕ್ತಿಯ ಫಲವಾಗಿ ಈ ಪುಸ್ತಕಗಳು ಇದೀಗ ಹೊರಬರುತ್ತಿವೆ.

**ಕೋಲಾರ ಜಿಲ್ಲೆಯ ಪ್ರಾಥಮಿಕ ರಂಗಮಾಹಿತಿ**

ಇದು ಮತ್ತೊಂದು ಗಡಿ ಜಿಲ್ಲೆ. ತಮಿಳುನಾಡು, ಆಂಧ್ರಪ್ರದೇಶದ ಪ್ರಭಾವವಿರುವ ಈ ನಾಡಿನಲ್ಲಿ ಪೌರಾಣಿಕ ನಾಟಕಗಳ ಪ್ರದರ್ಶನಗಳು ಹೆಚ್ಚು, ಹವ್ಯಾಸಿ ನಾಟಕಗಳು, ಬೀದಿ ನಾಟಕಗಳೂ ಸಾಕಷ್ಟು ಸಂಖ್ಯೆಯಲ್ಲಿ ಇಲ್ಲಿ ಪ್ರಯೋಗಗೊಳ್ಳುತ್ತವೆ.

ನಟ, ನಾಟಕಕಾರ, ನಿರ್ದೇಶಕ ಡಾ.ಮುನಿನಾರಾಯಣ ಅವರು ಜಿಲ್ಲೆಯ ಸಮಗ್ರ ರಂಗ ಚಟುವಟಿಕೆಯನ್ನು ಸಂಶೋಧಕನ ನಿಷ್ಠೆಯಿಂದ ಮಾಡಿದ್ದಾರೆ. ಹೆಸರು, ಅಂಕಿ ಅಂಶಗಳ ನಿಖರ ಮಾಹಿತಿ ಒದಗಿಸಿದ್ದಾರೆ. ಕೇಳಿದ ವಿಷಯವನ್ನು ಕರಾರುವಕ್ಕು ಎನ್ನುವಂತೆ ಮಾಡಿದ್ದಾರೆ. ಒಂದು ಸಾಲಿನ ಈ ಮಾಹಿತಿಗಳ ಹಿಂದಿನ ವಿವರಣೆ ಮತ್ತು ವಿಶ್ಲೇಷಣೆಗಳು ಮುಂದುವರಿದ ಭಾಗಗಳಾಗಿ ಮುಂದಿನ ದಿನಗಳಲ್ಲಿ ಬರಬೇಕಿದೆ.

**– ಗುಡಿಹಳ್ಳಿ ನಾಗರಾಜ**

ಪ್ರಕಟಣಾ ಸಮಿತಿ ಸದಸ್ಯರು :

**ಕೆ. ಜಗುಚಂದ್ರ**

**ಉಮೇಶ್ ಸಾಲಿಯಾನ್**

**ಹಾಲ್ಕುರಿಕೆ ಶಿವಶಂಕರ್**

# ಕರ್ನಾಟಕ ನಾಟಕ ಅಕಾಡೆಮಿ

**ಎಲ್.ಬಿ.ಶೇಖ (ಮಾಸ್ತರ)**
ಅಧ್ಯಕ್ಷರು

**ಸದಸ್ಯರು**

ರಾಜಪ್ಪ ಕಿರಗಸೂರು
ಕಲ್ಪನಾ ನಾಗನಾಥ್
ಪಿ.ತಿಪ್ಪೇಸ್ವಾಮಿ
ಎಂ.ಎಸ್.ಗುಣಶೀಲನ್
ಮುದ್ದಣ್ಣ ರಟ್ಟೆಹಳ್ಳಿ
ಅನ್ನಪೂರ್ಣ ಸಾಗರ
ಗುಡಿಹಳ್ಳಿ ನಾಗರಾಜ
ಎಚ್.ಷಡಾಕ್ಷರಪ್ಪ ಹೊಸಮನಿ
ಶ್ರೀಪಾದ ಭಟ್
ಉಮೇಶ ಸಾಲಿಯಾನ್
ವಿ.ಎನ್.ಅಕ್ಕಿ
ಬಿ.ಎಂ.ರಾಮಚಂದ್ರ
ಎನ್.ಕೆ.ರಾಮಕೃಷ್ಣ
ಎ.ವರಲಕ್ಷ್ಮಿ
ಎಸ್.ಕೆ.ಕೊನೆಸಾಗರ
ಹಾಲ್ಕುರಿಕೆ ಶಿವಶಂಕರ್
ಎಲ್.ಎಚ್.ರಂಗನಾಥಪ್ಪ
ಕೆ.ಜಗುಚಂದ್ರ

ರಿಜಿಸ್ಟ್ರಾರ್:
**ಸಿದ್ಧರಾಜು**

ಯೋಜನಾ ಸಹಾಯಕರು:
**ಕೆ.ರೇವಣ್ಣ**

ಕಚೇರಿ ಸಿಬ್ಬಂದಿ:
**ಸೌಭಾಗ್ಯಲಕ್ಷ್ಮೀ, ಎಂ.ಭೋಜಣ್ಣ, ಸುಶೀಲಮ್ಮ**

# ಮೊದಲ ಮಾತು

**ಸ**ಮೂಹ ಮಾಧ್ಯಮಗಳಲ್ಲೊಂದಾದ ರಂಗಭೂಮಿಯು ಅತ್ಯಂತ ಪರಿಣಾಮಕಾರಿಯಾದದ್ದು ಹಾಗೂ ಪ್ರಬಲಾದದ್ದು. ಆದರೆ ಇಂದು ಎಲೆಕ್ಟ್ರಾನಿಕ್ ಮೀಡಿಯಗಳ ಮತ್ತು ಜಾಗತಿಕ ಸಂಸ್ಕೃತಿಯ ಪ್ರಭಾವದಿಂದ ಕನ್ನಡ ರಂಗಭೂಮಿಯು ಅಪಾಯದ ಅಂಚಿನಲ್ಲಿ ಸಿಲುಕಿದೆ. ಇಂತಹ ಸಂದರ್ಭದಲ್ಲಿ ರಂಗಭೂಮಿಯಲ್ಲಿ ಸೇವೆ ಸಲ್ಲಿಸಿರುವವರ ವಿವರಗಳನ್ನು ಪ್ರಸ್ತುತದಲ್ಲಿ ರಂಗಸೇವಾನಿರತರಾದಂತಹವರ ವಿವರಗಳನ್ನು ಮುಂದಿನ ಪೀಳಿಗೆಗಾಗಿ ಸಂರಕ್ಷಿಸಬೇಕಾದದ್ದು ಆದ್ಯ ಕರ್ತವ್ಯ. ಆ ನಿಟ್ಟಿನಲ್ಲಿ ಕರ್ನಾಟಕ ನಾಟಕ ಅಕಾಡೆಮಿಯು ಜಿಲ್ಲಾ ರಂಗಮಾಹಿತಿ ಕೈಪಿಡಿಯನ್ನು ಹೊರತರಲು ಕೈಗೊಂಡಿರುವ ಕ್ರಮವು ನಿಜಕ್ಕೂ ಶ್ಲಾಘನೀಯ.

ಕೋಲಾರ ಜಿಲ್ಲಾ ರಂಗಮಾಹಿತಿ ಕೈಪಿಡಿಯನ್ನು ಬರೆದು ಕೊಡುವಂತೆ ನನ್ನ ಮೇಲೆ ವಿಶ್ವಾಸವಿಟ್ಟು ನನ್ನನ್ನು ನೇಮಿಸಿದ್ದಕ್ಕೆ ಅಕಾಡೆಮಿಯ ಅಧ್ಯಕ್ಷರಿಗೂ ಎಲ್ಲಾ ಸದಸ್ಯರಿಗೂ ಅಧಿಕಾರಿಗಳಿಗೂ ಮತ್ತು ದೂರವಾಣಿಯ ಮೂಲಕ ಸಂಪರ್ಕಿಸಿ ನನಗೆ ಪ್ರೇರಣೆಯನ್ನು ನೀಡಿದ ಶ್ರೀ ಗುಡಿಹಳ್ಳಿ ನಾಗರಾಜ ರವರಿಗೂ ನನ್ನ ಹೃತ್ಪೂರ್ವಕ ವಂದನೆಗಳು.

ಮಾಹಿತಿ ಸಂಗ್ರಹಣೆಗಾಗಿ ಪತ್ರಿಕಾ ಪ್ರಕಟಣೆಯನ್ನು ನೀಡಿ, ಜಿಲ್ಲಾದ್ಯಂತ ಪ್ರವಾಸ ಮಾಡಿ ಹಲವಾರು ರಂಗ ಬಾಂಧವರನ್ನು ಸ್ನೇಹಿತರನ್ನು ಭೇಟಿ ಮಾಡಿ ಹಾಗೂ ಕೆಲವರನ್ನು ಇನ್ನು ಹೆಚ್ಚಿನ ಮಾಹಿತಿಗಾಗಿ ಪದೇ ಪದೇ ದೂರವಾಣಿ ಕರೆ ಮಾಡಿ ರಂಗ ಮಾಹಿತಿಯನ್ನು ಸಂಗ್ರಹಿಸಿರುತ್ತೇನೆ. ಆದರೆ ಇದರ ಬಗ್ಗೆ ಕೆಲವರು ತೋರಿದ ಆಸಕ್ತಿ ಮತ್ತು ನಿರಾಸಕ್ತಿಯನ್ನು ಸಮಭಾವದಿಂದ ಸ್ವೀಕರಿಸಿದ್ದೇನೆ. ಶ್ರೀನಿವಾಸಪುರ ತಾಲ್ಲೂಕು ಮುಳಬಾಗಿಲು ತಾಲ್ಲೂಕುಗಳಲ್ಲಿ ತೆಲುಗು ಭಾಷೆಯ ಪ್ರಭಾವ ಹೆಚ್ಚಾಗಿರುವುದರಿಂದ ಕನ್ನಡ ನಾಟಕಗಳ ಪ್ರದರ್ಶನ ತುಂಬಾ ವಿರಳ. ಇಂತಹ ಸಂದರ್ಭದಲ್ಲಿ ಮಾಹಿತಿ ಸಂಗ್ರಹಣೆಯಲ್ಲಿ ಹೆಚ್ಚಿನ ನೆರವನ್ನು ನೀಡಿದ ಸಹೋದರರಾದ ಶ್ರೀ ಸಿ. ಆಂಜಿನಪ್ಪನವರಿಗೂ ಹಾಗೂ ಉಪಧ್ಯಾಯರಾದ ಶ್ರೀ ವಿ. ನಾರಾಯಣಸ್ವಾಮಿ ಯವರಿಗೂ ನಿವೃತ್ತ ಉಪಾಧ್ಯಾಯರಾದ ವಿ.ವೆಂಕಟಮುನಿಯಪ್ಪನವರಿಗೂ ಎಸ್. ವೆಂಕಟೇಶಪ್ಪನವರಿಗೂ ವದಲಿ ನಾರಾಯಣಸ್ವಾಮಿ ಯವರಿಗೂ ನನ್ನ ಅನಂತ ಹಾಗೂ ಆತ್ಮೀಯ ಕೃತಜ್ಞತೆಗಳು.

ಇಂತಿ

ಡಾ. ಮುನಿನಾರಾಯಣ

# ಪರಿವಿಡಿ


| | | | |
|---|---|---|---|
| | ಪೀಠಿಕೆ | ... | ೯ |
| ೧. | ಜಿಲ್ಲಾ ರಂಗಭೂಮಿಯ ಸಂಕ್ಷಿಪ್ತ ಇತಿಹಾಸ | ... | ೧೦ |
| ೨. | ತಾಲ್ಲೂಕುವಾರು ಮಾಹಿತಿ | ... | ೧೨ |
| | ಅ) ಕೋಲಾರ ತಾಲ್ಲೂಕು ರಂಗಮಾಹಿತಿ | | |
| | ಆ)ಮಾಲೂರು ತಾಲ್ಲೂಕು ರಂಗಮಾಹಿತಿ | | |
| | ಇ)ಶ್ರೀನಿವಾಸಪುರ ತಾಲ್ಲೂಕು ರಂಗಮಾಹಿತಿ | | |
| | ಈ) ಬಂಗಾರಪೇಟೆ ತಾಲ್ಲೂಕು ರಂಗಮಾಹಿತಿ | | |
| | ಉ) ಮುಳಬಾಗಿಲು ತಾಲ್ಲೂಕು ರಂಗಮಾಹಿತಿ | | |
| ೩. | ಮಕ್ಕಳ ರಂಗಭೂಮಿ | ... | ೭೪ |
| ೪. | ಶಾಲಾ–ಕಾಲೇಜು ರಂಗಚಟುವಟಿಕೆಗಳು | ... | ೭೫ |
| ೫. | ಸಮಾರೋಪ | ... | ೭೬ |

# ಪೀಠಿಕೆ

**ಕೋ**ಲಾಹಲ ಅಥವಾ ಕುವಲಾಲ ಎಂಬ ತನ್ನ ಮೂಲ ಹೆಸರನ್ನು ಬದಲಿಸಿಕೊಂಡು ಕೋಲಾರ ಎಂಬುದಾಗಿ ಗುರ್ತಿಸಲ್ಪಟ್ಟಿರುವ ಕೋಲಾಹಲವು ಹಿಂದೆ ಗಂಗರ ಕುವಲಾಳ(ಇಂದಿನ ಕೋಲಾರ) ಮೆಚ್ಚಿನ ರಾಜಧಾನಿಯಾಗಿತ್ತು. ಶತಶೃಂಗ ಪರ್ವತಗಳನ್ನು ಹೊಂದಿರುವ ಕೋಲಾರವು ೨೦೦೮ ರಲ್ಲಿ ತನ್ನಿಂದ ಹೊರ ಹೋದ ಚಿಕ್ಕಬಳ್ಳಾಪುರ ಜಿಲ್ಲೆಯನ್ನು ಹೊರತು ಪಡಿಸಿ, ಜಿಲ್ಲಾ ಕೇಂದ್ರವಾಗಿ ರೂಪಗೊಂಡು ಆಡಳಿತಾತ್ಮಕವಾಗಿ ಕೋಲಾರ ತಾಲ್ಲೂಕು, ಬಂಗಾರಪೇಟೆ ತಾಲ್ಲೂಕು, ಮಾಲೂರು ತಾಲ್ಲೂಕು, ಮುಳಬಾಗಿಲು ತಾಲ್ಲೂಕು ಮತ್ತು ಶ್ರೀನಿವಾಸಪುರ ತಾಲ್ಲೂಕು ಹೀಗೆ ಒಟ್ಟು ೫ ತಾಲ್ಲೂಕುಗಳನ್ನು, ೨೭ ಹೋಬಳಿಗಳನ್ನು, ೧೫೬ ಗ್ರಾಮಪಂಚಾಯ್ತಿಗಳನ್ನು, ೧೫೭೮ ಜನ ವಸತಿ ಹಳ್ಳಿಗಳನ್ನು, ೨ ನಗರಸಭೆಗಳನ್ನು ಮತ್ತು ೪ ಪುರಸಭೆಗಳನ್ನು ತನ್ನ ಒಡಲಲ್ಲಿ ಹುದುಗಿಸಿಕೊಂಡಿದೆ.

ರಾಜ ಮನೆತನಗಳ ಆಳ್ವಿಕೆಯಿಂದ ಪ್ರಸಿದ್ಧಿಯನ್ನು ಪಡೆದಿರುವ ಕೋಲಾರ ಜಿಲ್ಲೆಯು ಸಾಹಿತ್ಯ ಮತ್ತು ಸಾಂಸ್ಕೃತಿಕವಾಗಿಯು ಖ್ಯಾತಿಯನ್ನು ಗಳಿಸಿದೆ. ಮಾನವನ ಮುದುಡಿದ ಮನಸ್ಸಿಗೆ ಹದವಾದ ಮುದವನ್ನು ನೀಡಿ, ಮನರಂಜನೆಯನ್ನು ಒದಗಿಸುವುದರ ಜೊತೆಗೆ ಸ್ವಾಸ್ಥ್ಯವಾದ ಮನೋಭೂಮಿಕೆಯನ್ನು ಸೃಷ್ಟಿಸುವಂತಹ ಸಾಂಸ್ಕೃತಿಕ ಆಯಾಮಗಳಲ್ಲಿ ರಂಗಭೂಮಿಯು ಒಂದು. ಇಂತಹ ಪವಿತ್ರ ಕನ್ನಡ ರಂಗಭೂಮಿಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳನ್ನು ಆಧಾರವಾಗಿಟ್ಟುಕೊಂಡು ಅಧ್ಯಯನ ಮಾಡಿದಾಗ ಪ್ರತಿ ಜಿಲ್ಲೆಯು ತನ್ನದೇ ಆದ ಕೊಡುಗೆಯನ್ನು ಕನ್ನಡ ರಂಗಭೂಮಿಗೆ ನೀಡಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ಕನ್ನಡ ರಂಗಭೂಮಿಗೆ ದುಡಿದ ನಾಟಕಕಾರರು ನಿರ್ದೇಶಕರು ನಟರು ತಬಲವಾದಕರು ಹಾರ್ಮೋನಿಯಂ ವಾದಕರು ರಂಗತಂಡಗಳು ಡ್ರಾಮಾಸೀನರಿ ಕಂಪನಿಗಳು ಮತ್ತು ನೇಪಥ್ಯಗಾರರನ್ನು ಪ್ರತಿ ತಾಲ್ಲೂಕುಗಳಲ್ಲಿ ಗುರ್ತಿಸಿ ಅವರುಗಳ ಕಿರು ಪರಿಚಯವನ್ನಾದರೂ ಕೋಲಾರ ಜಿಲ್ಲಾ ರಂಗಮಾಹಿತಿ ಕೈಪಿಡಿಯಲ್ಲಿ ಉಲ್ಲೇಖಿಸುತ್ತಿರುವುದು ಪರಮೋತ್ಕೃಷ್ಟವಾದದ್ದು.

# ೧. ಜಿಲ್ಲಾ ರಂಗಭೂಮಿಯ ಸಂಕ್ಷಿಪ್ತ ಇತಿಹಾಸ

**ಕೋ**ಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನ ದೇವನಹಳ್ಳಿಯಲ್ಲಿ ಜನಿಸಿದ ಡಿ ವಿ ಗುಂಡಪ್ಪನವರು ರಚಿಸಿದ ನಾಟಕಗಳಾದ ವಿದ್ಯಾರಣ್ಯ ವಿಜಯ, ಜಾಕ್ ಕೇಟ್ ಮತ್ತು ಮ್ಯಾಕ್‌ಬೆತ್ ಕೃತಿಗಳು; ಮಾಲೂರು ತಾಲೂಕಿನ ಮಾಸ್ತಿಯಲ್ಲಿ ಜನಿಸಿದ ಮಾಸ್ತಿವೆಂಕಟೇಶ್ ಅಯ್ಯಂಗಾರ್ ರಚಿಸಿದ ತಾಳಿಕೋಟೆ, ಯಶೋಧರಾ, ಸಾವಿತ್ರಿ, ಶಾಂತಾ, ಉಷಾ, ಕಾಕನಕೋಟೆ, ಅನಾರ್‌ಕಲಿ, ಶಿವಛತ್ರಪತಿ, ಪುರಂದರದಾಸ ಶ್ರೀರಾಮಪಟ್ಟಾಭಿಷೇಕ ನವರಾತ್ರಿ ಮುಂತಾದ ಕೃತಿಗಳು; ಕೋಲಾರದಲ್ಲಿ ಜನಿಸಿದ ಅ.ನ.ಕೃಷ್ಣರಾಯರು ರಚಿಸಿದ ಮದುವೆಯೋ ಮನೆಹಾಳೋ, ಆದದ್ದೇನು?, ಆಹುತಿ, ಬಣ್ಣದ ಬೀಸಣಿಗೆ, ಹಿರಣ್ಯಕಶುಪು, ಸ್ವರ್ಣಮೂರ್ತಿ ಅನುಗ್ರಹ, ಜಗಜ್ಯೋತಿ, ರಜಪೂತಲಕ್ಷ್ಮೀ, ಕಿತ್ತೂರು ಚೆನ್ನಮ್ಮ ಕನ್ನಡ ರಂಗಭೂಮಿಯಲ್ಲಿ ಮಹತ್ತರ ನಾಟಕಗಳು.

ಬಂಗಾರಪೇಟೆ ತಾಲೂಕಿನ ಬುಡಗೂರು ಗ್ರಾಮದಲ್ಲಿ ಜನಿಸಿದ ಬಿ.ಆರ್.ಪಂತುಲು ರವರು ಶಹಜಾನ್, ಸಂಸಾರನೌಕೆ, ಸದಾರಮೆ, ರಾಮಾಯಣ, ಗುಲೇಬಕಾವಲಿ ನಾಟಕಗಳಲ್ಲಿ ಅಭಿನಯಿಸಿದ್ದರು. ಕೆ.ಜಿ.ಎಫ್‌ನಲ್ಲಿ ಜನಿಸಿದ ಆರ್.ಎಸ್.ರಾಜಾರಾಮ್‌ರವರು ಹಣಹದ್ದು, ಮಗುಮದುವೆ, ಪಂಚಭೂತ, ಹೋರೂಲು, ಅವರೇಇವರು – ಇವರೇಅವರು ಮೊದಲಾದ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

ಸರಿತಾ ಜ್ಞಾನಾನಂದ ಕೋಲಾರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರಾಗಿ ಸೇವೆ ಸಲ್ಲಿಸಿದ ಸಂದರ್ಭದಲ್ಲಿ ಜಿಲ್ಲೆಯ ಸಾಹಿತಿಗಳನ್ನು ಗುರ್ತಿಸಿ ಶ್ರೇಷ್ಠ ಸಾಹಿತಿ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಹೆಣ್ಣೇ ಹೆಚ್ಚು, ಮೋಡಗಳು, ನಾಯಿಕೊಡೆ, ಯಕ್ಷಿಣಿ ಮತ್ತು ಥ್ಯಾಂಕ್ಯು ಮಿಸ್ಟರ್ ಗ್ಲಾಡ್ ಎಂಬ ನಾಟಕಗಳನ್ನು ರಚಿಸಿದ್ದಾರೆ.

ಲಕ್ಷ್ಮೀಪತಿ ಕೋಲಾರ ರಚಿಸಿದ ಸಿಂದ್‌ಆಟ, ಪಂಪನಿಗೆ ಬಿದ್ದ ಕನಸು, ಅಲ್ಲಮನ ಬಯಲಾಟ; ಬೀದಿ ನಾಟಕಗಳಾದ ಸಾವಿರ ಗಾದೆಗಳ ಸರದಾರ, ಭೂತ ಮತ್ತು ಕಳೆದು ಹೋದ ಪದೀಕರು ನಾಟಕಗಳು; ಕೋಟಗಾನಹಳ್ಳಿ ರಾಮಯ್ಯನವರು ರಚಿಸಿದ

ಗಂಗಭಾರತ, ಛರ್‌ಭರ್‌ಬುಡ್ಡಣ್ಣ, ಕಾಗೆಕಣ್ಣು ಇರುವೆಬಲ, ನಾಯಿತಿಪ್ಪ, ಮರ್ಜಿನ ಮತ್ತು ನಲವತ್ತು ಜನ ಕಳ್ಳರು, ಒಗಟಿನ ರಾಣಿ, ಹಕ್ಕಿಹಾಡು, ಬ್ಯಾ ಬ್ಯಾ ಬ್ಲ್ಯಾಕ್‌ಶೀಪ್, ಅಣ್ಣ ಹಜಾರೆ ಕೃತಿಗಳು ಸರಿತಾ ಜ್ಞಾನಾನಂದರವರು ರಚಿಸಿದ ನಾಟಕಗಳಾದ ಹೆಣ್ಣೆಹೆಚ್ಚು, ಮೋಡಗಳು, ನಾಯಿಕೊಡೆ, ರಾಕ್ಷಸ, ಥ್ಯಾಂಕ್ಯು ಮಿಸ್ಟರ್ ಗ್ಲ್ಯಾಡ್, ನಾಳೆ ಯಾರದು?, ಯಕ್ಷಿಣಿ, ಕೃತಿಗಳು , ಕೋಲಾರ ತಾಲ್ಲೂಕಿನ ಮಲಿಯಪ್ಪನಹಳ್ಳಿಯಲ್ಲಿ ಜನಿಸಿದ ಡಾ. ಮುನಿನಾರಾಯಣರವರು ರಚಿಸಿದ ಮಮತೆಯ ಮಡಿಲು, ಶಸ್ತ್ರಸನ್ಯಾಸ, ರಾಜಾಸತ್ಯವ್ರತ, ಅಲ್ಲೂರಿಸೀತಾರಾಮರಾಜು, ಸೀತಾಪರಿತ್ಯಾಗ್ತ, ಅಲೌಕಿಕದ ಕಡೆಗೆ ನಾರಾಣಪ್ಪನ ನಡೆಗೆ, ಅಜ್ಞಾನದ ಅತಿರೇಕ, ಶೂದ್ರಭಂಡಾರಿ ಮೊದಲಾದ ನಾಟಕಗಳು ಜಿಲ್ಲಾ ರಂಗಭೂಮಿಯನ್ನು ಶ್ರೀಮಂತಗೊಳಿಸಿವೆ. ಜಿಲ್ಲೆಯ ಇಡೀ ರಂಗಭೂಮಿಯು ವೃತ್ತಿ ಮತ್ತು ಹವ್ಯಾಸಿ ಎರಡೂ ಆಯಾಮಗಳನ್ನು ಒಳಗೊಂಡಿರುವುದರಿಂದ ಅವುಗಳನ್ನು ಪ್ರತ್ಯೇಕವಾಗಿ ಅವಲೋಕಿಸುವುದು ಉತ್ತಮವಾದದ್ದು.

## ವೃತ್ತಿ ರಂಗಭೂಮಿ

ಕಲೆಯ ಮೇಲೆ ಇದ್ದ ಆಸಕ್ತಿಯಿಂದಲೋ ಅಥವಾ ಬಡತನದ ಬವಣೆಯಿಂದಲೋ ಜೀವನೋಪಾಯಕ್ಕಾಗಿ ರಂಗಭೂಮಿಯನ್ನೇ ತನ್ನ ವೃತ್ತಿಯನ್ನಾಗಿ ಸ್ವೀಕರಿಸಿದ ತಾಂತ್ರಿಕ ಮತ್ತು ತಾಂತ್ರಿಕೇತರ ಸಿಬ್ಬಂದಿಗಳನ್ನು ಒಳಗೊಂಡಂತಹ ಸಮೂಹ ಮಾಧ್ಯಮವನ್ನು ವೃತ್ತಿರಂಗಭೂಮಿ ಎಂದು ಕರೆಯಬಹುದು.

## ಹವ್ಯಾಸಿ ರಂಗಭೂಮಿ

ರಂಗಭೂಮಿಯ ಹೊರತಾದ ವೃತ್ತಿಗಳನ್ನು ತನ್ನ ಜೀವನೋಪಾಯಕ್ಕಾಗಿ ಸ್ವೀಕರಿಸಿ, ಬಿಡುವಿನ ವೇಳೆಯಲ್ಲಿ ಅಥವಾ ಹಬ್ಬ ಹರಿದಿನಗಳಲ್ಲಿ ತನ್ನಲ್ಲಿರುವ ಪ್ರತಿಭೆಯನ್ನು ಆಸಕ್ತಿಯಿಂದ ರಂಗ ಮಾಧ್ಯಮದ ಮೂಲಕ ಪ್ರದರ್ಶಿಸಲು ಇರುವಂತಹ ತಾಂತ್ರಿಕ ಮತ್ತು ತಾಂತ್ರಿಕೇತರ ಸಿಬ್ಬಂದಿಗಳನ್ನು ಒಳಗೊಂಡಂತಹ ಸಮೂಹ ಮಾಧ್ಯಮವೇ ಹವ್ಯಾಸಿ ರಂಗಭೂಮಿ ಎನ್ನಬಹುದು.

# ೨. ತಾಲ್ಲೂಕುವಾರು ಮಾಹಿತಿ

## ಅ) ಕೋಲಾರ ತಾಲ್ಲೂಕು ರಂಗಮಾಹಿತಿ

### ವೃತ್ತಿ ರಂಗತಂಡಗಳ ಮಾಹಿತಿ

೧ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಕೃಪಾಪೋಷಿತ ನಾಟಕ ಮಂಡಳಿ, ಮದ್ದೇರಿ, ವೇಮಗಲ್ ಹೋಬಳಿ ಕೋಲಾರ ತಾಲೂಕು.

೨ ಶ್ರೀ ಸೋಮನಾಥೇಶ್ವರ ಸ್ವಾಮಿ ಮತ್ತು ಶ್ರೀಸತ್ಯಮ್ಮನವರ ಕೃಪಾಪೋಷಿತ ನಾಟಕ ಮಂಡಳಿ, ಅರಾಭಿಕೊತ್ತನೂರು, ವಕ್ಕಲೇರಿ ಹೋಬಳಿ ಕೋಲಾರ ತಾಲೂಕು.

೩. ಆದಿಮ, ಜಿಂಕೆರಾಮಯ್ಯ ಜೀವತಾಣ ಶಿವಗಂಗೆ ತೇರಳ್ಳಿ ಬೆಟ್ಟ, ಮಡೇರಹಳ್ಳಿ ಅಂಚೆ, ಕೋಲಾರ ತಾಲೂಕು.

೪. ವಿಶ್ವ ಸಾಂಸ್ಕೃತಿಕ ಮತ್ತು ಸಾಮಾಜಿಕ ಅಭಿವೃದ್ಧಿ ಸಂಸ್ಥೆ, ಮಲಿಯಪ್ಪನಹಳ್ಳಿ, ಕುರುಗಲ್ ಅಂಚೆ, ವೇಮಗಲ್ ಹೋಬಳಿ, ಕೋಲಾರ ತಾಲೂಕು.

೫. ಶ್ರೀ ಶನೇಶ್ವರ ಸ್ವಾಮಿ ಕೃಪಾಪೋಷಿತ ನಾಟಕ ಮಂಡಳಿ ಬೈರಂಡಹಳ್ಳಿ, ವೇಮಗಲ್ ಹೋಬಳಿ, ಕೋಲಾರ ತಾಲೂಕು.

### ಹವ್ಯಾಸಿ ರಂಗತಂಡಗಳ ಮಾಹಿತಿ

೧ ಶ್ರೀ ಚಂದ್ರಮೌಳೇಶ್ವರ ಕೃಪಾಪೋಷಿತ ನಾಟಕ ಮಂಡಳಿ, ನಾಗನಾಳ, ವೇಮಗಲ್ ಹೋಬಳಿ ಕೋಲಾರ ತಾಲೂಕು.

೨ ಕರ್ನಾಟಕ ಕಲಾ ಸಂಘ, ಕೋಟೆ, ಕೋಲಾರ

೩. ಬಸವೇಶ್ವರ ಸ್ವಾಮಿ ಕೃಪಾಪೋಷಿತ ನಾಟಕ ಮಂಡಳಿ, ಬೆಳಮಾರನಹಳ್ಳಿ, ವೇಮಗಲ್ ಹೋಬಳಿ ಕೋಲಾರ ತಾಲೂಕು.

೪ ಶ್ರೀ ಶನಿದೇವರ ಕೃಪಾಪೋಷಿತ ನಾಟಕ ಮಂಡಳಿ, ಬೆಳಮಾರನಹಳ್ಳಿ, ವೇಮಗಲ್ ಹೋಬಳಿ ಕೋಲಾರ ತಾಲೂಕು.

೫ ಶ್ರೀಗಂಮಮ್ಮದೇವಿ ಕೃಪಾಪೋಷಿತ ನಾಟಕ ಮಂಡಳಿ, ಬೆಳಮಾರನಹಳ್ಳಿ, ವೇಮಗಲ್ ಹೋಬಳಿ ಕೋಲಾರ ತಾಲೂಕು.

೬ ಶ್ರೀ ಶನಿದೇವರ ಕೃಪಾಪೋಷಿತ ನಾಟಕ ಮಂಡಳಿ, ವಿಶ್ವನಾಥಪುರ, ಕೋಲಾರ ತಾಲೂಕು.

೭ ಶ್ರೀ ಚೌಡೇಶ್ವರಿ ದೇವಿ ಕೃಪಾಪೋಷಿತ ನಾಟಕ ಮಂಡಳಿ, ಚೊಕ್ಕಪುರ, ನರಸಾಪುರ ಹೋಬಳಿ, ಕೋಲಾರ ತಾಲೂಕು.

೮ ಶ್ರೀ ಶನಿದೇವರ ಕೃಪಾಪೋಷಿತ ನಾಟಕ ಮಂಡಳಿ, ಲಕ್ಷ್ಮೀಸಾಗರ, ನರಸಾಪುರ ಹೋಬಳಿ, ಕೋಲಾರ ತಾಲೂಕು.

೯ ಶ್ರೀ ಆಂಜನೇಯ ಸ್ವಾಮಿ ಕೃಪಾಪೋಷಿತ ನಾಟಕ ಮಂಡಳಿ, ಚಂದ್ರಶೇಖರಪುರ, ವೇಮಗಲ್ ಹೋಬಳಿ ಕೋಲಾರ ತಾಲೂಕು.

೧೦ ಶ್ರೀ ಬಸವೇಶ್ವರ ಸ್ವಾಮಿ ಕೃಪಾಪೋಷಿತ ನಾಟಕ ಮಂಡಳಿ, ಮಡೇರಹಳ್ಳಿ ಕೋಲಾರ ತಾಲೂಕು.

೧೧ ಶ್ರೀ ಆಂಜನೇಯಸ್ವಾಮಿ ಕೃಪಾಪೋಷಿತ ಯುವಕ ನಾಟಕ ಮಂಡಳಿ, ಚಲುವನಹಳ್ಳಿ ಕೋಲಾರ ತಾಲೂಕು.

೧೨ ಶ್ರೀ ಆಂಜನೇಯಸ್ವಾಮಿ ಮತ್ತು ಶ್ರೀ ಚಂದ್ರಮೌಳೀಶ್ವರ ಸ್ವಾಮಿ ಕೃಪಾಪೋಷಿತ ನಾಟಕ ಮಂಡಳಿ ರಾಮಸಂದ್ರ, ನರಸಾಪುರ ಹೋಬಳಿ ಕೋಲಾರ ತಾಲ್ಲೂಕು.

೧೩ ಶ್ರೀ ಗಂಗಮ್ಮದೇವಿ ಕೃಪಾಪೋಷಿತ ನಾಟಕ ಮಂಡಳಿ ತಿಪ್ಪಸಂದ್ರ, ಹುತ್ತೂರು ಹೋಬಳಿ, ಕೋಲಾರ ತಾಲ್ಲೂಕು.

೧೪ ರಂಗಚೇತನ ಯುವಕರ ಸಂಘ, ಮಲಿಯಪ್ಪನಹಳ್ಳಿ, ಕುರುಗಲ್ ಅಂಚೆ, ವೇಮಗಲ್ ಹೋಬಳಿ ಕೋಲಾರ ತಾಲ್ಲೂಕು.

೧೫ ಶ್ರೀ ವೇಣುಗೋಪಾಲಸ್ವಾಮಿ ಕೃಪಾಪೋಷಿತ ನಾಟಕ ಮಂಡಳಿ, ಅಂಕತಟ್ಟಿ, ಸುಗಟೂರು ಹೋಬಳಿ, ಕೋಲಾರ ತಾಲ್ಲೂಕು.

೧೬ ಶ್ರೀ ಬಸವೇಶ್ವರಸ್ವಾಮಿ ಕನ್ನಡ ಕಲಾವಿದರ ಕ್ಷೇಮಾಭಿವೃದ್ಧಿ ಸಂಘ, ದೊಡ್ಡಅಯ್ಯೂರು, ತ್ಯಾವನಹಳ್ಳಿ ಪೋಸ್ಟ್, ವಕ್ಕಲೇರಿ ಹೋಬಳಿ, ಕೋಲಾರ ತಾಲ್ಲೂಕು.

# ಪ್ರಮುಖ ರಂಗನಟರು

## ಶ್ರೀ ಪಿ.ಮುನಿರೆಡ್ಡಿ



ಪೆಮ್ಮರೆಡ್ಡಿ ಮತ್ತು ಮುನಿಯಮ್ಮ ಎಂಬ ದಂಪತಿಗಳ ಮಗನಾಗಿ ಕೋಲಾರ ತಾಲೂಕಿನ ವೇಮಗಲ್ ಹೋಬಳಿ ಮದ್ದೇರಿ ಎಂಬ ಗ್ರಾಮದಲ್ಲಿ ಜನಿಸಿದ ಪಿ.ಮುನಿರೆಡ್ಡಿ ಯವರು ಕಳೆದ ೫೫ ವರ್ಷಗಳಿಂದಲೂ ಕಲೆಯನ್ನೇ ನಂಬಿ ಬಂದವರು ಹಾಗೂ ಬದುಕಿದವರು ರಾಮ, ಸೀತೆ, ಕೃಷ್ಣ, ಭೀಮ, ಅರ್ಜುನ, ದುರ್ಯೋಧನ, ಘಟೋತ್ಕಚ, ಹಾಗೂ ಋಷಿಗಳ ಪಾತ್ರಗಳನ್ನು ಹಗಲು ವೇಷಧಾರಿಯಾಗಿ ಸನಾತನ ಸಂಸ್ಕೃತಿಯನ್ನು ಉಳಿಸಿ ಬೆಳೆಸಿದ್ದಾರೆ.

### ಅಭಿನಯಿಸಿದ ಹಾಗೂ ನಿರ್ದೇಶಿಸಿದ ನಾಟಕಗಳು

ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ಕೃಪಾ ಪೋಷಿತ ನಾಟಕ ಮಂಡಳಿಯನ್ನು ಸ್ಥಾಪಿಸಿ ರಾಜ್ಯಾದ್ಯಂತ ಪ್ರದರ್ಶನಗಳನ್ನು ನೀಡಿದ್ದಾರೆ. ಶ್ರೀಕೃಷ್ಣ ಸಂಧಾನ, ಗಧಾಯುದ್ಧ, ಕರಿಭಂಟನ ಕಾಳಗ, ವಿಷಜ್ವಾಲೆ, ಕೃಷ್ಣಲೀಲಾ, ಮೊದಲಾದ ನಾಟಕಗಳನ್ನು ಪ್ರದರ್ಶಿಸಿದ್ದಾರೆ. ತನ್ನ ಸಂಸ್ಥೆಯ ಮೂಲಕ ಇತರ ಕಲಾವಿದರನ್ನು ಗುರ್ತಿಸಿ ಪ್ರಶಸ್ತಿ ಹಾಗೂ ಸನ್ಮಾನಗಳನ್ನು ನೀಡಿದ್ದಾರೆ. ನಟನೆಯ ಜೊತೆಗೆ ನಿರ್ದೇಶನಕ್ಕೂ ಕೈಹಾಕಿ ರಾಜಾ ಸತ್ಯವ್ರತ ಮತ್ತು ಶ್ರೀಕೃಷ್ಣ ಕಾಳಗ ನಾಟಕಗಳನ್ನು ನಿರ್ದೇಶಿಸಿದ್ದಾರೆ.

### ಪ್ರಶಸ್ತಿಗಳು


ಕರ್ನಾಟಕ ನಾಟಕ ಅಕಾಡೆಮಿ ಸದಸ್ಯನಾಗಿ ಸೇವೆ ಸಲ್ಲಿಸಿರುವ ಪಿ.ಮುನಿರೆಡ್ಡಿಯವರನ್ನು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ನಟಸಾರ್ವಭೌಮ, ನಾಟ್ಯಕಲಾವಿಶಾರದ ಮತ್ತು ಕಲಾರತ್ನ ಪ್ರಶಸ್ತಿಗಳು ಅಲಂಕರಿಸಿವೆ.

## ಶ್ರೀ ಪಿ.ಚಿಕ್ಕಮುನಿಯಪ್ಪ

ಪಾಪಣ್ಣ ಮತ್ತು ಸೀಮಕ್ಕ ಎಂಬ ದಂಪತಿಗಳ ಮಗನಾಗಿ ಕೋಲಾರ ತಾಲೂಕಿನ, ವಕ್ಕಲೇರಿ ಹೋಬಳಿಯ ಕೆಂದಟ್ಟಿ ಎಂಬ ಗ್ರಾಮದಲ್ಲಿ ಜನಿಸಿದ ಪಿ.ಚಿಕ್ಕಮುನಿಯಪ್ಪನವರು ಪೌರಾಣಿಕ ಕಥಾ ವಸ್ತುವನ್ನು ಹೊಂದಿರುವ ನಾಟಕಗಳ ಕಡೆಗೆ ಹೆಚ್ಚು ಆಕರ್ಷಿತರಾಗಿ ಕಳೆದ ೩೦ ವರ್ಷಗಳಿಂದಲೂ ರಂಗ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ.

#### ನಟಿಸಿದ ನಾಟಕಗಳು

ಕುರುಕ್ಷೇತ್ರ, ಶ್ರೀರಾಮಪಟ್ಟಾಭಿಷೇಕ, ಪಾಂಡವ ವಿಜಯ, ಶ್ರೀಕೃಷ್ಣ ರಾಯಭಾರ ನಾಟಕಗಳಲ್ಲಿ ಅಭಿನಯಿಸಿದ ಪಿ.ಚಿಕ್ಕಮುನಿಯಪ್ಪನವರಿಗೆ ದುರ್ಯೋಧನ ಹಾಗೂ ಭೀಮನ ಪಾತ್ರಗಳು ಹೆಚ್ಚು ಹೆಸರು ತಂದು ಕೊಟ್ಟಿವೆ. ಪಿ. ಚಿಕ್ಕಮುನಿಯಪ್ಪನವರು ಅಭಿನಯದ ಜೊತೆಗೆ ತಬಲ ವಾದಕರಾಗಿಯೂ ಸೇವೆ ಸಲ್ಲಿಸಿದ್ದಾರೆ.



## ಶ್ರೀ ಬಸವರಾಜು

ಅ.ದ್ಯಾವಣ್ಣ ಮತ್ತು ಪುಟ್ಟಮ್ಮ ಎಂಬವರ ಪುತ್ರನಾಗಿ ಕೋಲಾರ ತಾಲೂಕು, ವೇಮಗಲ್ ಹೋಬಳಿ, ಬೆಳಮಾರನಹಳ್ಳಿ ಗ್ರಾಮದಲ್ಲಿ ಜನಿಸಿದ ಬಸವರಾಜುರವರು ಕಳೆದ ೩೦ ವರ್ಷಗಳಿಂದಲೂ ರಂಗಚಟುವಟಿಕೆಗಳಲ್ಲಿ ತೊಡಗಿದ್ದಾರೆ.

#### ಅಭಿನಯಿಸಿದ ನಾಟಕಗಳು

ದ್ರೌಪತಿ ವಸ್ತ್ರಾಪಹರಣ, ಕುರುಕ್ಷೇತ್ರ, ಶ್ರೀಕೃಷ್ಣಪಾರಿಜಾತ, ದಾನವೀರಶೂರಕರ್ಣ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಅರ್ಜುನ ಮತ್ತು ಶ್ರೀಕೃಷ್ಣನ ಪಾತ್ರಗಳು ಇವರಿಗೆ ಹೆಸರು ತಂದುಕೊಟ್ಟಿವೆ.

#### ನಿರ್ದೇಶಿಸಿದ ನಾಟಕಗಳು

ನಟನೆಯ ಜೊತೆಗೆ ಯಕ್ಷಗಾನದ ನಾಟಕಗಳನ್ನು ತನ್ನ ತಂದೆಯ ಜೊತೆಯಲ್ಲಿ ಸಹ ನಿರ್ದೇಶಕರಾಗಿ ಕೆಲಸ ಮಾಡಿದ ಬಸವರಾಜು ಮುಂದೆ ಸ್ವತಂತ್ರ ನಿರ್ದೇಶಕನಾಗಿಯೂ ದ್ರೌಪತಿ ವಸ್ತ್ರಾಪಹರಣ, ಕುರುಕ್ಷೇತ್ರ, ಶ್ರೀಕೃಷ್ಣಪಾರಿಜಾತ ಮತ್ತು ದಾನವೀರ ಶೂರಕರ್ಣ ನಾಟಕಗಳನ್ನು ನಿರ್ದೇಶಿಸಿದ್ದಾರೆ.



## ಶ್ರೀ ಸಿ. ಆಂಜಿನಪ್ಪ

ಚಿಕ್ಕಮುನಿಯಪ್ಪ ಮತ್ತು ವೆಂಕಟಮ್ಮನವರ ಪ್ರೀತಿಯ ಪುತ್ರನಾಗಿ ಕೋಲಾರ ತಾಲೂಕಿನ ವೇಮಗಲ್ ಹೋಬಳಿಯ ಮಲಿಯಪ್ಪನಹಳ್ಳಿ ಗ್ರಾಮದಲ್ಲಿ ಜನಿಸಿದ ಸಿ.ಆಂಜಿನಪ್ಪನವರು ಕಳೆದ ೧೫ ವರ್ಷಗಳಿಂದಲೂ ರಂಗಭೂಮಿಯ ನಟರಾಗಿ ಸೇವೆ ಸಲ್ಲಿಸಿದ್ದಾರೆ.

### ಅಭಿನಯಿಸಿದ ನಾಟಕಗಳು

ದಾನವೀರ ಶೂರ ಕರ್ಣ, ಶನಿಪ್ರಭಾವ, ಮಧ್ಯಮ ವ್ಯಾಯೋಗ, ಟಿಪ್ಪುಸುಲ್ತಾನ್, ಸಂಗೊಳ್ಳಿರಾಯಣ್ಣ, ಲವ_ಕುಶ, ಶ್ರೀರಾಮಾಶ್ವಮೇಧಯಾಗ, ಭೀಮ ಘಟೋತ್ಕಚರ ಕಾಳಗ, ಪರ್ಣಕುಟೀರದ ಪುತ್ರರು ಪ್ರಚಂಡರಾವಣ, ಕುರುಕ್ಷೇತ್ರ, ರಾಜಾಸತ್ಯವ್ರತ ಮತ್ತು ಶಸ್ತ್ರಸನ್ಯಾಸ್ತ್ರ ನಾಟಕಗಳಲ್ಲಿ ಅಭಿನಯಿಸಿರುತ್ತಾರೆ. ಶನಿಮಹಾತ್ಮ ಹಾಗೂ ಸಂಗೊಳ್ಳಿರಾಯಣ್ಣನ ಪಾತ್ರಗಳು ಇವರಿಗೆ ಹೆಸರು ತಂದುಕೊಟ್ಟಿವೆ. ಜಿಲ್ಲಾ ಯುವ – ಪ್ರಶಸ್ತಿಯನ್ನು ಪಡೆದಿರುವ ಸಿ.ಆಂಜಿನಪ್ಪನವರು ವಿಶ್ವಸಾಂಸ್ಕೃತಿಕ ಮತ್ತು ಸಾಮಾಜಿಕ ಅಭಿವೃದ್ಧಿ ಸಂಸ್ಥೆಯ ಖಾಯಂ ನಟರು ಆಗಿದ್ದಾರೆ.

### ಸಹ ನಿರ್ದೇಶನ ಮಾಡಿದ ನಾಟಕಗಳು

ಮಧ್ಯಮ ವ್ಯಾಯೋಗ, ಟಿಪ್ಪುಸುಲ್ತಾನ್, ಸಂಗೊಳ್ಳಿರಾಯಣ್ಣ, ಲವ_ಕುಶ, ಶ್ರೀರಾಮಾಶ್ವಮೇಧಯಾಗ, ಭೀಮ ಘಟೋತ್ಕಚರ ಕಾಳಗ, ಪರ್ಣಕುಟೀರದ ಪುತ್ರರು, ಶಸ್ತ್ರಸನ್ಯಾಸ, ಪ್ರಚಂಡರಾವಣ, ಕುರುಕ್ಷೇತ್ರ ಮತ್ತು ರಾಜಾಸತ್ಯವ್ರತ ನಾಟಕಗಳಲ್ಲಿ ಸಹನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ.

## ಶ್ರೀ ಎನ್. ವೆಂಕಟಸ್ವಾಮಿ



ಜಿ. ನಾರಾಯಣಪ್ಪ ಮತ್ತು ಚಿನ್ನಮ್ಮ ಎಂಬ ದಂಪತಿಗಳಿಗೆ ಕೋಲಾರ ತಾಲ್ಲೂಕಿನ ಯಡಹಳ್ಳಿ ಗ್ರಾಮದಲ್ಲಿ ಜನಿಸಿದ ಎನ್. ವೆಂಕಟಸ್ವಾಮಿಯವರು ಪೌರಾಣಿಕ ನಾಟಕಗಳತ್ತ ಆಕರ್ಷಿತರಾಗಿ ಸ್ತ್ರೀ ಮತ್ತು ಪುರುಷ ಪಾತ್ರಗಳನ್ನು ಮಾಡಿ ಜನಮೆಚ್ಚಿಗೆಯನ್ನು ಪಡೆದವರು ತದನಂತರ ನಿರ್ದೇಶನದಲ್ಲೂ ತೊಡಗಿಸಿಕೊಂಡು ೪೦ ವರ್ಷಗಳಿಂದಲೂ ರಂಗಚಟುವಟಿಕೆಗಲ್ಲಿ ನಿರತರಾಗಿದ್ದಾರೆ.

### ಅಭಿನಯಿಸಿದ ನಾಟಕಗಳು

ಸಂಪೂರ್ಣ ರಾಮಾಯಣ, ಲಂಕಾ ದಹನ, ಮಾಯಾ ರಾವಣ, ಕೀಚಕ ವಧೆ, ರಾಮಾಂಜನೇಯ ಯುದ್ಧ, ಸಾರಂಗದರ, ಸತ್ಯ ಹರಿಶ್ಚಂದ್ರ, ಪಾಂಚಾಲಿ ಪ್ರತಿಜ್ಞೆ, ಶ್ರೀಕೃಷ್ಣಾರ್ಜುನ ಯುದ್ಧ, ಶ್ರೀಕೃಷ್ಣ ಲೀಲೆ, ಸಂಪೂರ್ಣ ರಾಮಾಯಣ, ಕೀಚಕ ವಧೆ. ಲಂಕಾ ದಹನ, ದಾನ ವೀರ ಶೂರ ಕರ್ಣ, ಶ್ರೀಕೃಷ್ಣ ರಾಯಬಾರ, ಭಕ್ತ ಪ್ರಹ್ಲಾದ. ವಿರಾಟ ಪರ್ವ, ಶ್ರೀಕೃಷ್ಣ ಪಾಂಡವ ವಿಜಯ, ಶ್ರೀರಾಮ ಪಟ್ಟಾಭಿಷೇಕ, ವಿಶ್ವಾಮಿತ್ರನ

ಗರ್ವಭಂಗ, ರಾಜಾ ವಿಕ್ರಮ, ರಾಜಾ ಸತ್ಯವ್ರತ, ರಾಜ ಸೂಯ ಯಾಗ, ಮತ್ತು ತ್ರಿಜನ್ಮ ಮೋಕ್ಷ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

## ಶ್ರೀ ಎನ್. ನಾರಾಯಣಸ್ವಾಮಿ.




ಕೋಲಾರ ತಾಲ್ಲೂಕು ವಕ್ಕಲೇರಿ ಹೋಬಳಿ, ತ್ಯಾವನಹಳ್ಳಿ ಪೋಸ್ಟ್, ದೊಡ್ಡ ಅಯ್ಯೂರು ಗ್ರಾಮದ ದಿವಂಗತ ನಂಬಿಹಳ್ಳಿಪ್ಪ ಮತ್ತು ಚೌಡೇಶ್ವರಮ್ಮ ದಂಪತಿಗಳ ಮಗನಾದ ಶ್ರೀ ಎನ್. ನಾರಾಯಣಸ್ವಾಮಿ ಕಳೆದ ೩೫ ವರ್ಷಗಳಿಂದಲೂ ರಂಗಭೂಮಿ ನಟರಾಗಿ ಸೇವೆಸಲ್ಲಿಸುತ್ತಿದ್ದಾರೆ. ಶ್ರೀ ಬಸವೇಶ್ವರಸ್ವಾಮಿ ಕನ್ನಡ ಕಲಾವಿದರ ಕ್ಷೇಮಾಭಿವೃದ್ಧಿ ಸಂಘ (ರಿ) ವನ್ನು ಸ್ಥಾಪಿಸಿ ಕ್ರಿಯಾಶೀಲರಾಗಿದ್ದಾರೆ.

**ಅಭಿನಯಿಸಿದ ನಾಟಕಗಳು**

ಕುರುಕ್ಷೇತ್ರ, ರಾಜಾ ವಿಕ್ರಮ, ಶನೇಶ್ವರ ಕಲ್ಯಾಣ, ದಾನ ವೀರ ಶೂರ ಕರ್ಣ ಮತ್ತು ರಾಜಾ ಸತ್ಯವ್ರತ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

## ಶ್ರೀ ಎಂ. ಶ್ರೀನಿವಾಸ




ಕೋಲಾರ ತಾಲ್ಲೂಕು ವಕ್ಕಲೇರಿ ಹೋಬಳಿ, ತ್ಯಾವನಹಳ್ಳಿ ಪೋಸ್ಟ್, ದೊಡ್ಡ ಅಯ್ಯೂರು ಗ್ರಾಮದ ದಿವಂಗತ ಮುನಿಶಾಮಪ್ಪ ಮತ್ತು ಚಿನ್ನಮ್ಮ ದಂಪತಿಗಳ ಮಗನಾದ ಶ್ರೀ ಎಂ. ಶ್ರೀನಿವಾಸ ಕಳೆದ ೩೭ ವರ್ಷಗಳಿಂದಲೂ ರಂಗಭೂಮಿಯ ಹಾಸ್ಯನಟರಾಗಿ ಸ್ತ್ರೀ ಮತ್ತು ಪುರುಷ ಪಾತ್ರಗಳನ್ನು ನಿರ್ವಹಿಸುವುದರ ಮೂಲಕ ಸೇವೆಸಲ್ಲಿಸುತ್ತಿದ್ದಾರೆ.

**ಅಭಿನಯಿಸಿದ ನಾಟಕಗಳು**

ರುಕ್ಮಿಣಿ ಸ್ವಯಂವರ, ಕುರುಕ್ಷೇತ್ರ, ರಾಜಾ ವಿಕ್ರಮ, ಶನೇಶ್ವರ ಕಲ್ಯಾಣ, ದಾನ ವೀರ ಶೂರ ಕರ್ಣ ಮತ್ತು ಲಕ್ಷಂ ಭಕ್ಷಯಾಮಿ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

## ಶ್ರೀ ಎ.ಎಂ.ಮುಳವಾಗಿಲಪ್ಪ



ಮುನಿಯಪ್ಪ ಮತ್ತು ಬಚ್ಚಮ್ಮನವರ ಮಗನಾಗಿ ಕೋಲಾರ ತಾಲೂಕಿನ ವಕ್ಕಲೇರಿ ಹೋಬಳಿಯ ಅರಾಭಿಕೊತ್ತನೂರು ಗ್ರಾಮದಲ್ಲಿ ಜನಿಸಿದ ಎ.ಎಂ.ಮುಳವಾಗಿಲಪ್ಪ ಕಳೆದ ೨೫ ವರ್ಷಗಳಿಂದಲೂ ರಂಗಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ.

**ಅಭಿನಯಿಸಿದ ನಾಟಕಗಳು**

ಕೃಷ್ಣಾರ್ಜುನ, ಗಯಚರಿತ್ರೆ, ದ್ರೌಪದಿ ವಸ್ತ್ರಾಪಹರಣ, ಕರಿರಾಜ ಚಂದ್ರ, ರಾಜಾಸತ್ಯವ್ರತ, ಕುರುಕ್ಷೇತ್ರ ಮತ್ತು ದಾನವೀರಶೂರ ಕರ್ಣ ನಾಟಕಗಳಲ್ಲಿ ಅಭಿನಯಿಸಿರುತ್ತಾರೆ. ಹಗಲು ವೇಷಧಾರಿಯಾಗಿಯೂ ಗುರ್ತಿಸಿಕೊಂಡಿರುವ ಎ.ಎಂ.ಮುಳವಾಗಿಲಪ್ಪನವರು ರಾಕ್ಷಸಿ ಪಾತ್ರಗಳಲ್ಲಿ ಹೆಚ್ಚು ಖ್ಯಾತಿಯನ್ನು ಗಳಿಸಿದ್ದಾರೆ.

**ಕೊಳಲು ವಾದನ ಮಾಡಿದ ನಾಟಕಗಳು**

ಗಯಚರಿತ್ರೆ, ಕರಿರಾಜಚಂದ್ರನ ಕಾಳಗ, ರಾಜಾಸತ್ಯವ್ರತ ಮತ್ತು ಶ್ರೀಪಾರ್ವತಿಕಲ್ಯಾಣ ನಾಟಕಗಳಿಗೆ ಕೊಳಲುವಾದನ ಮಾಡಿ ರಂಗ ಸಂಗೀತಕ್ಕೂ ತನ್ನ ಕೊಡುಗೆಯನ್ನು ನೀಡಿದ್ದಾರೆ.

**ಮುಖವೀಣೆ ನುಡಿಸಿದ ನಾಟಕಗಳು**

ಕರಿಭಂಟನ ಕಾಳಗ ನಾಟಕದಲ್ಲಿ ಮುಖವೀಣೆ ನುಡಿಸಿರುತ್ತಾರೆ. ಎ.ಎಂ.ಮುಳವಾಗಿಲಪ್ಪನವರು ಅಭಿನಯದ ಜೊತೆಗೆ ಕೊಳಲು ಹಾಗೂ ಮುಖವೀಣೆ ಕಲಾವಿದನಾಗಿ ತನ್ನ ಅಪೂರ್ವ ಪ್ರತಿಭೆಯಿಂದ ಗುರ್ತಿಸಿಕೊಂಡಿದ್ದಾರೆ.

## ಶ್ರೀ ಡಾ. ಮುನಿನಾರಾಯಣ



ಚಿಕ್ಕಮುನಿಯಪ್ಪ ಮತ್ತು ವೆಂಕಟಮ್ಮ ಎಂಬ ದಂಪತಿಗಳ ಮಗನಾಗಿ ಕೋಲಾರ ತಾಲೂಕಿನ ವೇಮಗಲ್ ಹೋಬಳಿಯ ಮಲಿಯಪ್ಪನಹಳ್ಳಿ ಗ್ರಾಮದಲ್ಲಿ ಜನಿಸಿದ ಡಾ. ಮುನಿನಾರಾಯಣ ವಿದ್ಯಾರ್ಥಿಯಾಗಿದ್ದಾಗಲೇ ರಂಗಭೂಮಿಯತ್ತ ಆಕರ್ಷಿತರಾದರು. ನಾಟಕದಲ್ಲಿ ಡಿಪ್ಲೊಮೊ ಹಾಗೂ ಸ್ನಾತಕೊತರ ಪದವಿಗಳನ್ನು ಪಡೆದಿದ್ದಾರೆ.

"ಕನ್ನಡ ರಂಗಭೂಮಿಗೆ ಕಂಬಾರರ ಕೊಡುಗೆ"ಎಂಬ ವಿಷಯದ ಬಗ್ಗೆ ಪಿ.ಎಚ್.ಡಿ.ಪದವಿಯನ್ನು ಪಡೆದವರು ಕೆ.ಹಿರಣ್ಣಯ್ಯ ಮಿತ್ರ ಮಂಡಲಿ ಪ್ರವೇಶಿಸಿ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿದ ನಂತರ ಮಲ್ನಾಡ್‌ಚಂದ್ರು ನಾಟಕತಂಡ, ಕೆ.ರಾಮಚಂದ್ರಪ್ಪ ಮತ್ತು ಸಂಗಡಿಗರ ತಂಡ, ಕ್ರಿಯಾರಂಗ, ವಿದಾತ ಕಲಾವಿದರು ಮತ್ತು ಪರಿವರ್ತನಕಲಾ ಸಂಸ್ಥೆಗಳಲ್ಲಿ ನಟನಾಗಿ ಸೇವೆಸಲ್ಲಿಸಿದ ನಂತರ ಅದರಲ್ಲಿಯೇ ತನ್ನನ್ನು ವಿಶೇಷವಾಗಿ ತೊಡಗಿಸಿಕೊಳ್ಳುವ ನಿಟ್ಟಿನಲ್ಲಿ "ವಿಶ್ವ ಸಾಂಸ್ಕೃತಿಕ ಮತ್ತು ಸಾಮಾಜಿಕ ಅಭಿವೃದ್ಧಿ ಸಂಸ್ಥೆ"ಯನ್ನು ಹುಟ್ಟು ಹಾಕಿದರು. ಹಲವಾರು ಹೊಸ ಪ್ರತಿಭೆಗಳಿಗೆ ಅಭಿನಯದ ಬಗ್ಗೆ ಪ್ರವಚನಗಳನ್ನು ನೀಡಿ ಅವರನ್ನು ಸಂಪೂರ್ಣ ಕಲಾವಿದರನ್ನಾಗಿ ರೂಪಿಸಿದ ಹೆಗ್ಗಳಿಕೆ ಇವರದು.

### ಅಭಿನಯಿಸಿದ ನಾಟಕಗಳು

ಲಂಚಾವತಾರ, ನಡುಬೀದಿ ನಾರಾಯಣ, ಮಕ್ಮಲ್‌ಟೋಪಿ, ಭ್ರಷ್ಟಾಚಾರ, ಚನ್ನಪ್ಪ ಚನ್ನೇಗೌಡ, ಧರ್ಮದೇವತೆ, ಗೌಡರಗದ್ಲ, ಸೇವಂತಿ ಪ್ರಸಂಗ, ಹಯವದನ, ಮಧ್ಯಮ ವ್ಯಾಯೋಗ, ತಾಯಿ, ಸಂಕ್ರಾಂತಿ, ಮಹಾಮಾಯಿ, ಅಗ್ನಿವರ್ಣ, ಭಗವಜ್ಜುಕೀಯಂ, ಸಿದ್ಧತೆ, ತೆರೆಗಳು, ಶ್ರೀಕೃಷ್ಣಸಂಧಾನ, ಮಮತೆಯಮಡಿಲು ಟಿಪ್ಪುಸುಲ್ತಾನ್, ಪೋಲಿಸರಿದ್ದಾರೆ ಎಚ್ಚರಿಕೆ, ದಾನ ವೀರ ಶೂರಕರ್ಣ, ಲವ_ಕುಶ, ಹೆಣ್ಣುವರವೋ...! ಶಾಪವೋ...?, ಸಂಗೊಳ್ಳಿ ರಾಯಣ್ಣ, ಪರ್ಣಕುಟೀರದ ಪುತ್ರರು, ಭೀಮ-ಘಟೋತ್ಕಚರ ಕಾಳಗ, ಶ್ರೀರಾಮಾಶ್ವಮೇಧಯಾಗ, ತೊಟ್ಟಿಮಗಳು, ವರಪರೀಕ್ಷೆ, ಮಂಟೇಸ್ವಾಮಿ ಕಥಾ ಪ್ರಸಂಗ, ಮುತ್ತಾಳಮಾವ, ಪತ್ರ ಸಂಗಪ್ಪನಕೊಲೆ, ಬೆಲ್ಚಿ, ಶಸ್ತ್ರ ಸನ್ಯಾಸ, ಪ್ರಚಂಡ ರಾವಣ, ಕುರುಕ್ಷೇತ್ರ, ರಾಜಾ ಸತ್ಯವ್ರತ ಮೊದಲಾದ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

### ಪ್ರಶಸ್ತಿಗಳು

೫೧ ಗಂಟೆಗಳ ಕಾಲ ತನ್ನ ನಿರಂತರ ಅಭಿನಯದಿಂದ ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್ ಸಂಸ್ಥೆಯಿಂದ ಪ್ರಮಾಣ ಪತ್ರವನ್ನು ಸ್ವೀಕರಿಸಿರುವ ಡಾ. ಮುನಿನಾರಾಯಣ ನವರಿಗೆ "ಕನ್ನಡ ಶ್ರೀ"ಪ್ರಶಸ್ತಿಯು ಲಭಿಸಿದೆ.

## ಶ್ರೀ ಎಂ.ಸಿ.ವಿಶ್ವನಾಥ



ಚಿಕ್ಕಮುನಿಯಪ್ಪ ಮತ್ತು ವೆಂಕಟಮ್ಮನವರ ಮಗನಾಗಿ ಕೋಲಾರ ತಾಲೂಕಿನ ವೇಮಗಲ್ ಹೋಬಳಿಯ ಮಲಿಯಪ್ಪನಹಳ್ಳಿ ಗ್ರಾಮದಲ್ಲಿ ಜನಿಸಿದ ಎಂ.ಸಿ.ವಿಶ್ವನಾಥ ವಿದ್ಯಾರ್ಥಿ ದೆಸೆಯಲ್ಲಿಯೇ ರಂಗಭೂಮಿಗೆ ಧುಮುಕಿದರು. ವೃತ್ತಿಯಲ್ಲಿ ಪೋಲೀಸ್ ಆದರೂ ಕಲೆಯ ಮೇಲಿನ ಆಸಕ್ತಿ ಅವರನ್ನು ರಂಗಚಟುವಟಿಕೆಗಳಲ್ಲಿ ಕ್ರಿಯಾಶೀಲರನ್ನಾಗಿ ಮಾಡಿದೆ.

**ಅಭಿನಯಿಸಿದ ನಾಟಕಗಳು**

ಲವ_ಕುಶ, ಸ್ವರ್ಣಕುಟೀರದ ಪುತ್ರರು, ಮಧ್ಯಮ ವ್ಯಾಯೋಗ, ಶ್ರೀರಾಮಾಶ್ವಮೇಧಯಾಗ, ಭೀಮ–ಘಟೋತ್ಕಜರ ಕಾಳಗ, ರಾಜಾಸತ್ಯವ್ರತ, ಶಸ್ತ್ರಸನ್ಯಾಸ ಮತ್ತು ಬಭ್ರುವಾಹನ, ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಬಭ್ರುವಾಹನ ಪಾತ್ರವು ಇವರಿಗೆ ಹೆಸರು ತಂದುಕೊಟ್ಟಿದೆ. ಪ್ರಸ್ತುತದಲ್ಲಿ ವಿಶ್ವ ಸಾಂಸ್ಕೃತಿಕ ಮತ್ತು ಸಾಮಾಜಿಕ ಅಭಿವೃದ್ಧಿ ಸಂಸ್ಥೆಯಲ್ಲಿ ಖಾಯಂ ನಟನಾಗಿ ಸೇವೆಸಲ್ಲಿಸುತ್ತಿದ್ದಾರೆ.

## ಶ್ರೀ ಹೆಚ್.ಆರ್.ವಿವೇಕಾನಂದಸ್ವಾಮಿ



ರಾಜಣ್ಣ ಮತ್ತು ಆಂಜಿನಮ್ಮನವರ ಮಗನಾಗಿ ಕೋಲಾರ ತಾಲೂಕಿನ ವೇಮಗಲ್ ಹೋಬಳಿಯ ಮಲಿಯಪ್ಪನಹಳ್ಳಿ ಗ್ರಾಮದಲ್ಲಿ ಜನಿಸಿದ ಹೆಚ್.ಆರ್. ವಿವೇಕಾನಂದ ಸ್ವಾಮಿಯವರು ನಟನಾಗಿ ಸೇವೆಸಲ್ಲಿಸುತ್ತಿದ್ದಾರೆ.

**ಅಭಿನಯಿಸಿದ ನಾಟಕಗಳು**

ರಾಜಾಸತ್ಯವ್ರತ, ಶಸ್ತ್ರಸನ್ಯಾಸ, ಲವ_ಕುಶ, ದಾನವೀರಶೂರಕರ್ಣ ಮತ್ತು ಶೂದ್ರಭಂಡಾರಿ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಇವರಿಗೆ ಗಾಂಧಿ ಪಾತ್ರವು ಖ್ಯಾತಿಯನ್ನು ಕೊಟ್ಟಿದೆ.

## ಶ್ರೀಮತಿ ಎಂ.ವಿ.ಸುನಂದಮ್ಮ



ಮುನಿಯಪ್ಪ ಮತ್ತು ಲಕ್ಷ್ಮಮ್ಮನವರ ಮಗಳಾಗಿ ಮತ್ತು ಎಂ.ಎನ್.ವೆಂಕಟರೆಡ್ಡಿ ಧರ್ಮಪತ್ನಿಯಾದ ಎಮ್.ವಿ. ಸುನಂದಮ್ಮನವರು ಕೋಲಾರ ತಾಲೂಕಿನ ವೇಮಗಲ್ ಹೋಬಳಿಯ, ಮದ್ದೇರಿ ಅಂಚೆ, ಸೀತಪ್ಪನಹಳ್ಳಿ ಗ್ರಾಮದಲ್ಲಿ ಜನಿಸಿದವರು. ೨೫ ವರ್ಷಗಳಿಂದ ರಂಗಭೂಮಿಯಲ್ಲಿ ನಟಿಯಾಗಿ ಸೇವೆಸಲ್ಲಿಸುತ್ತಿದ್ದಾರೆ.

**ಅಭಿನಯಿಸಿದ ನಾಟಕಗಳು**

ದ್ರೌಪದಿ ವಸ್ತ್ರಾಭರಣ, ರಾಜವಿಕ್ರಮ, ಶನಿಪ್ರಭಾವ ಮತ್ತು ಕುರುಕ್ಷೇತ್ರ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

## ಶ್ರೀ ಸಿ.ಮುನಿರಾಜು



ಚಿಕ್ಕಮುನಿಯಪ್ಪ ಮತ್ತು ವೆಂಕಟಮ್ಮ ಎಂಬುವರ ಪುತ್ರನಾಗಿ ಕೋಲಾರ ತಾಲೂಕಿನ ವೇಮಗಲ್ ಹೋಬಳಿಯ ಮಲಿಯಪ್ಪನಹಳ್ಳಿ ಗ್ರಾಮದಲ್ಲಿ ಸಿ.ಮುನಿರಾಜುರವರು ಜನ್ಮತಾಳಿದವರು. ಪ್ರಸ್ತುತದಲ್ಲಿ ವಿಶ್ವಸಾಂಸ್ಕೃತಿಕ ಮತ್ತು ಸಾಮಾಜಿಕ ಅಭಿವೃದ್ಧಿ ಸಂಸ್ಥೆಯಲ್ಲಿ ಖಾಯಂ ನಟನಾಗಿ ಸೇವೆಸಲ್ಲಿಸುತ್ತಿದ್ದಾರೆ.

**ಅಭಿನಯಿಸಿದ ನಾಟಕಗಳು**

ಮಧ್ಯಮ ವ್ಯಾಯೋಗ, ಶಸ್ತ್ರಸನ್ಯಾಸ, ಶ್ರೀರಾಮಾಶ್ವಮೇಧಯಾಗ, ಲವ_ಕುಶ, ಭೀಮ–ಘಟೋತ್ಕಜರ ಕಾಳಗ ಮತ್ತು ಸ್ವರ್ಣಕುಟೀರದ ಪುತ್ರರು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಸಿ.ಮುನಿರಾಜುರವರಿಗೆ ಪೋಲಿಸ್ ಅಧಿಕಾರಿ ಪಾತ್ರವು ಖ್ಯಾತಿಯನ್ನು ತಂದು ಕೊಟ್ಟಿದೆ.

## ಶ್ರೀ ನಾರಾಯಣಪ್ಪ




ಚಿಕ್ಕವೀರಪ್ಪ ಮತ್ತು ಸಂಜೀವಮ್ಮ ಎಂಬುವರ ಪುತ್ರನಾಗಿ ಕೋಲಾರ ತಾಲೂಕಿನ ವೇಮಗಲ್ ಹೋಬಳಿ, ಮದ್ದೇರಿ ಅಂಚೆಯ ಸೀತಪ್ಪನಹಳ್ಳಿ ಗ್ರಾಮದಲ್ಲಿ ನಾರಾಯಣಪ್ಪ ನವರು ಜನ್ಮತಾಳಿದರು. ಪ್ರಸ್ತುತದಲ್ಲಿ ಇವರು ನಟನಾಗಿ ಸೇವೆಸಲ್ಲಿಸುತ್ತಿದ್ದಾರೆ.

**ಅಭಿನಯಿಸಿದ ನಾಟಕಗಳು**

ಕರಿಭಂಟನಕಾಳಗ, ದ್ರೌಪದಿ ವಸ್ತ್ರಾಪಹರಣ, ರಾಜಾ ಸತ್ಯವ್ರತ ಹಾಗೂ ರಾಜಾ ವಿಕ್ರಮಾದಿತ್ಯ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

## ಹೆಚ್. ರಂಜಿತ್‌ಕುಮಾರ್




ಕೋಲಾರ ತಾಲೂಕಿನ ವೇಮಗಲ್ ಹೋಬಳಿಯ ಮಲಿಯಪ್ಪನಹಳ್ಳಿ ಗ್ರಾಮದಲ್ಲಿ ಶ್ರೀಮತಿ ಆಂಜಿನಮ್ಮ ಮತ್ತು ರಾಜಣ್ಣನವರ ಮಗನಾಗಿ ಜನಿಸಿದ ಹೆಚ್. ರಂಜಿತ್‌ಕುಮಾರ್ ನಟನಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**ಅಭಿನಯಿಸಿದ ನಾಟಕಗಳು**

ಪ್ರಚಂಡರಾವಣ ರಾಜಾಸತ್ಯವ್ರತ, ಲವಕುಶ, ಭೀಮ–ಘಟೋತ್ಕಜರ ಕಾಳಗ, ಸ್ವರ್ಣಕುಟೀರದ ಪುತ್ರರು ಶಸ್ತ್ರಸನ್ಯಾಸ, ಶ್ರೀರಾಮಾಶ್ವಮೇಧಯಾಗ, ಸಂಗೊಳ್ಳಿ ರಾಯಣ್ಣ ಮತ್ತು ಶೂದ್ರಭಂಡಾರಿ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

## ಶ್ರೀ ಆಂಜಿನೇಯ ರೆಡ್ಡಿ



ನರಸಿಂಹಪ್ಪ ಮತ್ತು ಲಕ್ಷ್ಮಮ್ಮನವರ ಮಗನಾಗಿ ಕೋಲಾರ ತಾಲೂಕಿನ ವೇಮಗಲ್ ಹೋಬಳಿ,ಮದ್ದೇರಿಅಂಚೆ,ಸೀತಪ್ಪನಹಳ್ಳಿ ಗ್ರಾಮದಲ್ಲಿ ಜನಿಸಿದವರು. ಕಳೆದ ೨೦ ವರ್ಷಗಳಿಂದ ರಂಗಭೂಮಿಯಲ್ಲಿ ಖಾಯಂ ನಟನಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**ಅಭಿನಯಿಸಿದ ನಾಟಕಗಳು**

ಪ್ರಚಂಡ ರಾವಣ ರಾಜಾ ಸತ್ಯವ್ರತ, ಲವಕುಶ, ಭೀಮಾಘಟೋತ್ಕಜರ ಕಾಳಗ, ಸ್ವರ್ಣಕುಟೀರದಪುತ್ರರು, ಶಸ್ತ್ರಸನ್ಯಾಸ, ಶ್ರೀರಾಮಾಶ್ವಮೇಧಯಾಗ ಮತ್ತು ಸಂಗೊಳ್ಳಿ ರಾಯಣ್ಣ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

## ಎಂ.ಎ.ಚಕ್ರವರ್ತಿ



ಸಿ.ಆಂಜಿನಪ್ಪ ಮತ್ತು ಯಶೋಧಮ್ಮ ನವರ ಪುತ್ರನಾಗಿ ಕೋಲಾರ ತಾಲೂಕಿನ ವೇಮಗಲ್ ಹೋಬಳಿಯ ಮಲಿಯಪ್ಪನಹಳ್ಳಿ ಗ್ರಾಮದಲ್ಲಿ ಜನ್ಮತಾಳಿದ ಎಂ.ಎ.ಚಕ್ರವರ್ತಿ ನಟನಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**ಅಭಿನಯಿಸಿದ ನಾಟಕಗಳು**

ಮಧ್ಯಮವ್ಯಾಯೋಗ, ಲವಕುಶ, ಭೀಮಾ-ಘಟೋತ್ಕಜರ ಕಾಳಗ, ಶ್ರೀರಾಮಾಶ್ವಮೇಧಯಾಗ, ಶಸ್ತ್ರಸನ್ಯಾಸ ಸ್ವರ್ಣಕುಟೀರದ ಪುತ್ರರು, ರಾಜಾಸತ್ಯವ್ರತ ಮತ್ತು ಶೂದ್ರಭಂಡಾರಿ ನಾಟಕಗಳಲ್ಲಿ ಎಂ.ಎ.ಚಕ್ರವರ್ತಿಯವರು ಅಭಿನಯಿಸಿದ್ದಾರೆ. ಇವರಿಗೆ ಸೂತ್ರಧಾರ ಹಾಗೂ ಬಭ್ರುವಾಹನ ಪಾತ್ರವು ಖ್ಯಾತಿಯನ್ನು ತಂದುಕೊಟ್ಟಿವೆ.

## ಎಂ.ಎ. ಚೈತ್ರ




ಸಿ. ಆಂಜಿನಪ್ಪ ಮತ್ತು ಶ್ರೀಮತಿ ಯಶೋಧಮ್ಮ ನವರ ಹಿರಿಯ ಮಗಳಾದ ಎಂ.ಎ.ಚೈತ್ರ ಕೋಲಾರ ತಾಲ್ಲೂಕು, ವೇಮಗಲ್ ಹೋಬಳಿ, ಕುರುಗಲ್ ಅಂಚೆ, ಮಲಿಯಪ್ಪನಹಳ್ಳಿ ಗ್ರಾಮದವರಾಗಿದ್ದು ತನ್ನ ೭ನೇ ವಯಸ್ಸಿನಲ್ಲಿಯೇ ,ಬಾಲ ನಟಿಯಾಗಿ ರಂಗಭೂಮಿಯನ್ನು ಪ್ರವೇಶಿಸಿ ಕಳೆದ ೮ ವರ್ಷಗಳಿಂದಲೂ ವೃತ್ತಿ ರಂಗಭೂಮಿ ಹಾಗೂ ಹವ್ಯಾಸಿ ರಂಗಭೂಮಿಯ ಎರಡೂ ಆಯಾಮಗಳಲ್ಲಿ ಸ್ತ್ರೀ ಮತ್ತು ಪುರುಷ ಪಾತ್ರಗಳನ್ನು ಮಾಡುತ್ತಾ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

**ಅಭಿನಯಿಸಿದ ನಾಟಕಗಳು**

ಲವ–ಕುಶ, ಶಸ್ತ್ರಸನ್ಯಾಸ, ಕುರುಕ್ಷೇತ್ರ, ಭೀಮಾ–ಘಟೋತ್ಕಚರ ಕಾಳಗ, ರಾಜಾ ಸತ್ಯವ್ರತ, ಪ್ರಚಂಡ ರಾವಣ, ಟಿಪ್ಪುಸುಲ್ತಾನ್, ನಾಡ ಪ್ರೇಮಿ ಸಂಗೊಳ್ಳಿ ರಾಯಣ್ಣ ಮತ್ತು ಶೂದ್ರಭಂಡಾರಿ ನಾಟಕಗಳಲ್ಲಿ ಅಭಿನಯಿಸಿರುವುದಲ್ಲದೇ ಜಿಲ್ಲಾ ಮಟ್ಟದ ಪ್ರತಿಭೋತ್ಸವ ಕಾರ್ಯಕ್ರಮಗಳಲ್ಲಿ ಪ್ರಥಮ ಸ್ಥಾನವನ್ನು ಗಳಿಸಿದ ಹೆಗ್ಗಳಿಕೆ ಇವರದು.

## ಶ್ರೀ ಎಂ. ನಾರಾಯಣಪ್ಪ



ಮುಳಬಾಗಲಪ್ಪ ಮತ್ತು ಸೊಣ್ಣಮ್ಮನವರ ಪ್ರೀತಿಯ ಮಗನಾಗಿ ಕೋಲಾರ ತಾಲೂಕಿನ ವೇಮಗಲ್ ಹೋಬಳಿಯ ಬೆಳಮಾರನಹಳ್ಳಿ ಗ್ರಾಮದಲ್ಲಿ ಜನಿಸಿದ ಎಂ. ನಾರಾಯಣಪ್ಪನವರು ಕಳೆದ ಇಪ್ಪತ್ತು ವರ್ಷಗಳಿಂದಲೂ ರಂಗ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ.


**ಅಭಿನಯಿಸಿದ ನಾಟಕಗಳು**

ಗಂಗೆಗೌರಿ ಮತ್ತು ಪುರೂರವ ಚಕ್ರವರ್ತಿ ನಾಟಕಗಳಲ್ಲಿ ಅಭಿನಯಿಸಿರುತ್ತಾರೆ.

**ತಬಲ ವಾದನ ಮಾಡಿದ ನಾಟಕಗಳು**

ದ್ರೌಪತಿ ವಸ್ತ್ರಾಪಹರಣ, ರಾಜಾಸತ್ಯವ್ರತ ಮತ್ತು ಶಸ್ತ್ರಸನ್ಯಾಸ ನಾಟಕಗಳಲ್ಲಿ ತಬಲ ನುಡಿಸಿರುವ ಎಂ.ನಾರಾಯಣಪ್ಪನವರೇ ಅಭಿನಯಕ್ಕಿಂತ ತಬಲ ವಾದನಕ್ಕೆ ಹೆಚ್ಚು ಪ್ರಾಧಾನ್ಯತೆ ನೀಡಿದ್ದಾರೆ.

## ಶ್ರೀ. ಎನ್.ನಾಗರಾಜ್



ಕೋಲಾರ ತಾಲ್ಲೂಕು, ವೇಮಗಲ್ ಹೋಬಳಿ, ಮದ್ದೇರಿ ಗ್ರಾಮದ ನರಸಿಂಹಪ್ಪ ಮತ್ತು ಅಕ್ಕಯಮ್ಮ ದಂಪತಿಗಳ ಮಗನಾದ ಎನ್. ನಾಗರಾಜ್ ಸುಮಾರು ೧೮ ವರ್ಷಗಳಿಂದ ರಂಗಭೂಮಿಯಲ್ಲಿ ನಟನಾಗಿ ಸೇವೆಯನ್ನು ಸಲ್ಲಿಸಿದ್ದಾರೆ.

### ಅಭಿನಯಿಸಿದ ನಾಟಕಗಳು

ದಾನವೀರಶೂರಕರ್ಣ, ಶ್ರೀರಾಮ ಪಟ್ಟಾಭಿಷೇಕ ಮೊದಲಾದ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

## ಶ್ರೀ ಟಿ.ಸಿ. ನಾರಾಯಣಸ್ವಾಮಿ.

ಚಿಕ್ಕಕಾಳಪ್ಪ ಮತ್ತು ನಾರಾಯಣಮ್ಮನವರ ಪುತ್ರನಾಗಿ ಕೋಲಾರ ತಾಲೂಕಿನ ವೇಮಗಲ್ ಹೋಬಳಿಯ ಬೆಳಮಾರನಹಳ್ಳಿ ಗ್ರಾಮದಲ್ಲಿ ಜನಿಸಿದ ಟಿ.ಸಿ. ನಾರಾಯಣಸ್ವಾಮಿಯವರು ಕಳೆದ ೧೫ ವರ್ಷಗಳಿಂದಲೂ ರಂಗ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

### ಅಭಿನಯಿಸಿದ ನಾಟಕಗಳು

ಶ್ರೀಕೃಷ್ಣ ಸಂಧಾನ, ಕುರುಪಾಂಡವ ಸಂಗ್ರಾಮ, ದಾನವೀರಶೂರಕರ್ಣ, ಕುರುಕ್ಷೇತ್ರ, ಶ್ರೀಕೃಷ್ಣ ಕಾಳಗ ಮತ್ತು ದ್ರೌಪತಿವಸ್ತ್ರಾಪಹರಣ ನಾಟಕಗಳಲ್ಲಿ ನಟಿಸಿರುತ್ತಾರೆ. ಭೀಮನ ಪಾತ್ರ ಟಿ.ಸಿ.ನಾರಾಯಣಸ್ವಾಮಿ ಯವರಿಗೆ ಹೆಸರು ತಂದು ಕೊಟ್ಟಿದೆ.

### ಪ್ರಶಸ್ತಿಗಳು

ಹಲವು ಸಂಘ ಸಂಸ್ಥೆಗಳಿಂದ ಸನ್ಮಾನಿತರಾಗಿರುವ ಟಿ.ಸಿ.ನಾರಾಯಣ ಸ್ವಾಮಿಯವರು "ನೃಪತುಂಗ" ಪ್ರಶಸ್ತಿಯನ್ನು ಸ್ವೀಕರಿಸಿರುತ್ತಾರೆ.

## ಶ್ರೀ ಬಿ.ಎ.ಗಂಗಾಧರ್



ಶ್ರೀ ಆಂಜಿನಯ್ಯಸ್ವಾಮಿ ಮತ್ತು ಲಕ್ಷ್ಮಮ್ಮ ಎಂಬ ದಂಪತಿಗಳ ಮಗನಾಗಿ ಕೋಲಾರ ತಾಲೂಕಿನ ವೇಮಗಲ್ ಹೋಬಳಿಯ ಬೈರಂಡಹಳ್ಳಿ ಗ್ರಾಮದಲ್ಲಿ ಜನಿಸಿದ ಬಿ.ಎ. ಗಂಗಾಧರ್ ಕಳೆದ ೧೫ ವರ್ಷಗಳಿಂದಲೂ ರಂಗಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ.

### ಸಹ ನಿರ್ದೇಶನ ಮಾಡಿದ ನಾಟಕಗಳು

ಶ್ರೀ ಮಹಾದಂತ ಚಕ್ರವರ್ತಿ, ರಾಜಾಸತ್ಯವ್ರತ ಮತ್ತು ರಾಜಾವಿಕ್ರಮ ನಾಟಕಗಳನ್ನು ಶ್ರೀ ಆಂಜಿನಯ್ಯಸ್ವಾಮಿಯವರ ಸಹಕಾರದೊಂದಿಗೆ ಸಹನಿರ್ದೇಶನ ಮಾಡಿರುತ್ತಾರೆ.

### ಹಾರ್ಮೋನಿಯಂ ನುಡಿಸಿದ ನಾಟಕಗಳು

ರಂಗ ಸಂಗೀತದಲ್ಲಿಯೂ ತನ್ನನ್ನು ತೊಡಗಿಸಿಕೊಂಡಿರುವ ಬಿ.ಎ. ಗಂಗಾಧರ್ ರಾಜಾವಿಕ್ರಮ, ಶ್ರೀಮಹಾದಂತ ಚಕ್ರವರ್ತಿ ಮತ್ತು ರಾಜಾಸತ್ಯವ್ರತ ನಾಟಕಗಳಿಗೆ ಹಾರ್ಮೋನಿಯಂ ನುಡಿಸಿ ಸಂಗೀತವನ್ನು ನೀಡಿರುತ್ತಾರೆ.

## ಶ್ರೀ ಕೆ.ನಾರಾಯಣಚಾರಿ

ಕೃಷ್ಣಾಚಾರಿ ಮತ್ತು ಮಂಗಮ್ಮನವರ ಪುತ್ರನಾಗಿ ಕೋಲಾರ ತಾಲ್ಲೂಕಿನ ವೇಮಗಲ್ ಹೋಬಳಿಯ ಹುಲ್ಲುಂಕಲ್ಲು ಗ್ರಾಮದಲ್ಲಿ ಜನಿಸಿದ ಕೆ.ನಾರಾಯಣಚಾರಿ ಕಳೆದ ೧೫ ವರ್ಷಗಳಿಂದಲೂ ರಂಗಭೂಮಿಯಲ್ಲಿ ಸೇವೆಸಲ್ಲಿಸುತ್ತಿದ್ದಾರೆ.


### ಹಾರ್ಮೋನಿಯಂ ನುಡಿಸಿದ ನಾಟಕಗಳು

ಕುರುಕ್ಷೇತ್ರ ಮತ್ತು ದ್ರೌಪತಿ ವಸ್ತ್ರಾಪಹರಣ ನಾಟಕಗಳಿಗೆ ಹಾರ್ಮೋನಿಯಂ ನುಡಿಸಿ ರಂಗಸಂಗೀತ ಕ್ಷೇತ್ರದಲ್ಲಿ ಕೆ. ನಾರಾಯಣಾಚಾರಿಯವರು ಗುರ್ತಿಸಿ ಕೊಂಡಿದ್ದಾರೆ.

### ಪ್ರಶಸ್ತಿಗಳು

ಬೆಂಗಳೂರಿನ ವಿನಾಯಕ ಕಲಾ ಸಂಘದಿಂದ "ನೃಪತುಂಗ" ಪ್ರಶಸ್ತಿಯನ್ನು ಸ್ವೀಕರಿಸಿದ್ದಾರೆ.

## ಶ್ರೀ ನಾಗೇಶ್



ಕೋಲಾರ ತಾಲ್ಲೂಕು, ನರಸಾಪುರ ಹೋಬಳಿ, ಚಾಕಸರಹಳ್ಳಿ ಅಂಚೆ, ಲಕ್ಷ್ಮೀಸಾಗರ ಗ್ರಾಮದ ಆಂಜಿನಪ್ಪ ಮತ್ತು ನಾರಾಯಣಮ್ಮ ದಂಪತಿಗಳ ಮಗನಾದ ನಾಗೇಶ್ ಕಳೆದ ೨೦ ವರ್ಷಗಳಿಂದಲೂ ರಂಗಭೂಮಿ ನಟ, ನಿರ್ದೇಶಕರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

### ನಿರ್ದೇಶಿಸಿ ಅಭಿನಯಿಸಿದ ನಾಟಕಗಳು

ಸತ್ಯ ಹರಿಶ್ಚಂದ್ರ, ರಾಜಾ ಸತ್ಯವ್ರತ, ರಾಜಾ ವಿಕ್ರಮ ನಾಟಕಗಳನ್ನು ನಿರ್ದೇಶಿಸಿದ್ದಾರೆ.

## ಶ್ರೀ ಸುಲೇಮಾನ್



ದಿ.ಸತ್ತಾರ್ ಸಾಬಿ ಮತ್ತು ಫಾತಿಮಾಬಿ ಎಂಬ ದಂಪತಿಗಳ ಮಗನಾಗಿ ಜನಿಸಿದ ಸುಲೇಮಾನ್‌ಖಾನ್ ಪ್ರಸ್ತುತದಲ್ಲಿ ಕೋಲಾರ ನಗರದಲ್ಲಿ ವಾಸವಾಗಿದ್ದಾರೆ.

**ಅಭಿನಯಿಸಿದ ನಾಟಕಗಳು**

ವಿದ್ಯಾರ್ಥಿಯಾಗಿದ್ದಾಗಲೇ ರಂಗಭೂಮಿಯತ್ತ ಆಕರ್ಷಿತರಾದ ಸುಲೇಮಾನ್‌ಖಾನ್‌ರವರು ಮುಂದೆ ಪ್ರೇಮಪಲ್ಲವಿ, ಭೀಮಾರ್ಜುನರ ಗರ್ವಭಂಗ, ಭರತನಗರಿ, ವಿಧುರಾಶ್ವಥಾಂದೋಲನ, ಪಂಡಿತ ದಿಗ್ವಿಜಯಭಂಗ, ಮತ್ತು ಆಕಾಶಬುಟ್ಟಿ ನಾಟಕಗಳಲ್ಲಿ ಅಭಿನಯಿಸಿದ್ದಾರೆ.


## ಶ್ರೀ ಕೆ.ಎನ್. ಮಂಜುನಾಥ

ಕೋಲಾರ ನಗರದ ಕನಕನಪಾಳ್ಯ,ಡೋರ್ ನಂ.೯೧/೧ ರಲ್ಲಿ ವಾಸವಾಗಿರುವ ಕೆ. ನಾರಾಯಣಸ್ವಾಮಿ ಮತ್ತು ಕೌಸಲ್ಯಮ್ಮ ದಂಪತಿಗಳ ಮಗನಾದ ಕೆ.ಎನ್. ಮಂಜುನಾಥ ಕಳೆದ ೩೫ ವರ್ಷಗಳಿಂದಲೂ ರಂಗಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. 'ಭೂಮಿ ಪೂಜೆ ಜಾನಪದ ಕಲಾತಂಡ'ದ ಖಾಯಂ ನಟರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**ಅಭಿನಯಿಸಿದ ನಾಟಕಗಳು**

ಮಾನವಕುಲವೊಂದೇ, ಭರತನಗರಿ, ಗಂಗಭಾರತ, ಗುಣಮುಖಿ, ಎಸ್.ಪಿ. ಹರಿಕೃಷ್ಣ, ಪಾರ್ವತಿ ಮಹಾತ್ಮೆ, ಸತ್ಯಹರಿಶ್ಚಂದ್ರ, ಹುತ್ತವಬಡಿದರೆ, ಸಂಕ್ರಾಂತಿ ನಾಗಮಂಡಲ, ಮಹಾಶಿವರಾತ್ರಿ ನಾಟಕಗಳ ಜೊತೆಗೆ ಹಳ್ಳಿಗಾಡು ಹಸುಗೂಸೆ, ಹೆಣ್ಣು ಅಬಲೆಯಲ್ಲ, ನೀರು ಮತ್ತು ಸ್ವಚ್ಛಭಾರತ್, ಆಂದೋಲನ ಮೊದಲಾದ ಬೀದಿನಾಟಕಗಳ ಪ್ರದರ್ಶನಗಳಲ್ಲಿ ಅಭಿನಯಿಸಿದ್ದಾರೆ.

## ಶ್ರೀ ಮುನಿಶಾಮಪ್ಪ



ಕೋಲಾರ ತಾಲ್ಲೂಕು ನರಸಾಪುರ ಹೋಬಳಿ, ಚಾಕಸರಹಳ್ಳಿ ಅಂಚೆ, ಲಕ್ಷ್ಮೀಸಾಗರ ಗ್ರಾಮದ ಮುನಿಯಪ್ಪ ಮತ್ತು ಲಕ್ಷ್ಮಮ್ಮ ದಂಪತಿಗಳ ಮಗನಾದ ಮುನಿಶಾಮಪ್ಪ ಕಳೆದ ೧೫ ವರ್ಷಗಳಿಂದಲೂ ರಂಗಭೂಮಿ ನಟರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**ಅಭಿನಯಿಸಿದ ನಾಟಕಗಳು**

ರಾಜಾ ಸತ್ಯವ್ರತ ಮತ್ತು ರಾಜಾ ವಿಕ್ರಮ ಮೊದಲಾದ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

# ಪ್ರಮುಖ ನಿರ್ದೇಶಕರು

## ಶ್ರೀ ಆಂಜಿನಯ್ಯಸ್ವಾಮಿ



ಹನುಮಪ್ಪ ಮತ್ತು ದೊಡ್ಡಚೌಡಮ್ಮನವರ ಮಗನಾಗಿ ಕೊಲಾರ ತಾಲೂಕಿನ ವೇಮಗಲ್ ಹೋಬಳಿಯ ಬೈರಂಡಹಳ್ಳಿ ಗ್ರಾಮದಲ್ಲಿ ಜನಿಸಿದ ಶ್ರೀ ಆಂಜಿನಯ್ಯಸ್ವಾಮಿ ಕಳೆದ ೩೦ ವರ್ಷಗಳಿಂದಲೂ ರಂಗಭೂಮಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ತನ್ನದೇ ಆದಂತಹ 'ಶ್ರೀಶನೇಶ್ವರಸ್ವಾಮಿ ಡ್ರಾಮಾ ಸೀನ್ಸ್ ಸಪ್ಲೈಯರ್ಸ್ ' ಕಂಪನಿಯನ್ನು ಹೊಂದಿದ್ದರು. ಪ್ರಸ್ತುತದಲ್ಲಿ ಎಲ್ಲಾ ರಂಗಪರಿಕರಗಳು ಹಾಗೂ ಸೀನರಿಗಳನ್ನು ಆರ್ಥಿಕ ಮುಗ್ಗಟ್ಟಿನಿಂದಾಗಿ ಮಾರಾಟ ಮಾಡಿರುತ್ತಾರೆ.

**ನಿರ್ದೇಶಿಸಿದ ನಾಟಕಗಳು**

ಶ್ರೀಮಹಾದಂತ ಚಕ್ರವರ್ತಿ, ರಾಜಾಸತ್ಯವ್ರತ, ರಾಜಾಪುರೂರವ ಹಾಗೂ ಭಟ್ಟಿ ವಿಕ್ರಮ ನಾಟಕಗಳನ್ನು ನಿರ್ದೇಶಿಸಿ ಇತರ ತಂಡಗಳಿಂದ ಸುಮಾರು ೩೦೦ ಪ್ರಯೋಗಗಳನ್ನು ಮಾಡಿದ್ದಾರೆ.

**ಪ್ರಶಸ್ತಿಗಳು**

ರಂಗತರಬೇತಿಶಿಬಿರಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಗುರ್ತಿಸಿಕೊಂಡಿರುವ ಶ್ರೀ ಆಂಜಿನಯ್ಯ ಸ್ವಾಮಿಯವರಿಗೆ "ರಂಗಕೌಸ್ತುಭ" ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

## ಶ್ರೀ ಡಾ. ಮುನಿನಾರಾಯಣ

ಚಿಕ್ಕಮುನಿಯಪ್ಪ ಮತ್ತು ವೆಂಕಟಮ್ಮ ಎಂಬ ದಂಪತಿಗಳ ಮಗನಾಗಿ ಕೋಲಾರ ತಾಲೂಕಿನ ವೇಮಗಲ್ ಹೋಬಳಿಯ ಮಲಿಯಪ್ಪನಹಳ್ಳಿ ಗ್ರಾಮದಲ್ಲಿ ಜನಿಸಿದ ಡಾ. ಮುನಿನಾರಾಯಣ ಅಭಿನಯದ ಜೊತೆಗೆ ನಿರ್ದೇಶನಕ್ಕೂ ಕೈಹಾಕಿ ಮಮತೆಯ ಮಡಿಲು, ಎಚ್ಚರಿಕೆ...!ಎಚ್ಚರಿಕೆ...!ಎಚ್ಚರಿಕೆ...!, ಟಿಪ್ಪುಸುಲ್ತಾನ್, ವರಪರೀಕ್ಷೆ, ಸಂಗೊಳ್ಳಿರಾಯಣ್ಣ, ಲವ_ಕುಶ, ಶಸ್ತ್ರಸನ್ಯಾಸ, ಮಧ್ಯಮ ವ್ಯಾಯೋಗ, ಶ್ರೀರಾಮಾಶ್ವಮೇಧಯಾಗ, ಭೀಮ–ಘಟೋತ್ಕಚರ ಕಾಳಗ, ಪರ್ಣಕುಟೀರದ ಪುತ್ರರು, ಪ್ರಚಂಡ ರಾವಣ, ಕುರುಕ್ಷೇತ್ರ, ರಾಜಾ ಸತ್ಯವ್ರತ, ಅಜ್ಞಾನದ ಅತಿರೇಕ ಮತ್ತು ಶೂದ್ರಭಂಡಾರಿ ನಾಟಕಗಳನ್ನು ನಿರ್ದೇಶಿಸಿ ಪ್ರದರ್ಶನಗಳನ್ನು ನೀಡಿದ್ದಾರೆ.



## ಶ್ರೀ ಎನ್. ವೆಂಕಟಸ್ವಾಮಿ

ಜಿ. ನಾರಾಯಣಪ್ಪ ಮತ್ತು ಚಿನ್ನಮ್ಮ ಎಂಬ ದಂಪತಿಗಳಿಗೆ ಕೋಲಾರ ತಾಲ್ಲೂಕಿನ ಯಡಹಳ್ಳಿ ಗ್ರಾಮದಲ್ಲಿ ಜನಿಸಿದ ಎನ್. ವೆಂಕಟಸ್ವಾಮಿಯವರು ಪೌರಾಣಿಕ ನಾಟಕಗಳತ್ತ ಆಕರ್ಷಿತರಾಗಿ ಸ್ತ್ರೀ ಮತ್ತು ಪುರುಷ ಪಾತ್ರಗಳನ್ನು ಮಾಡಿ ಜನಮೆಚ್ಚಿಗೆಯನ್ನು ಪಡೆದವರು ತದನಂತರ ನಿರ್ದೇಶನದಲ್ಲೂ ತೊಡಗಿಸಿಕೊಂಡು ೪೦ ವರ್ಷಗಳಿಂದಲೂ ರಂಗಚಟುವಟಿಕೆಗಲ್ಲಿ ನಿರತರಾಗಿದ್ದಾರೆ.




### ನಿರ್ದೇಶಿಸಿದ ನಾಟಕಗಳು

ಸಾರಂಗದರ, ಸತ್ಯ ಹರಿಶ್ಚಂದ್ರ, ಪಾಂಚಾಲಿ ಪ್ರತಿಜ್ಞೆ, ಶ್ರೀಕೃಷ್ಣಾರ್ಜುನ ಯುದ್ಧ, ಶ್ರೀಕೃಷ್ಣ ಲೀಲೆ, ಸಂಪೂರ್ಣ ರಾಮಾಯಣ, ಕೀಚಕ ವಧೆ, ಲಂಕಾ ದಹನ, ರಾಮಾಂಜನೇಯ ಯುದ್ಧ, ದಾನ ವೀರ ಶೂರ ಕರ್ಣ, ಶ್ರೀಕೃಷ್ಣ ರಾಯಬಾರ, ಭಕ್ತ ಪ್ರಹ್ಲಾದ, ವಿರಾಟ ಪರ್ವ, ಶ್ರೀಕೃಷ್ಣ ಪಾಂಡವ ವಿಜಯ, ಶ್ರೀರಾಮ ಪಟ್ಟಾಭಿಷೇಕ, ವಿಶ್ವಾಮಿತ್ರನ ಗರ್ವಭಂಗ, ರಾಜಾ ವಿಕ್ರಮ, ರಾಜಾ ಸತ್ಯವ್ರತ, ರಾಜ ಸೂಯ ಯಾಗ, ಮತ್ತು ತ್ರಿಜನ್ಮ ಮೋಕ್ಷ ನಾಟಕಗಳನ್ನು ನಿರ್ದೇಶಿಸಿದ್ದಾರೆ.

## ನೇಪಥ್ಯಗಾರರು

### ಶ್ರೀ ಮುನಿಯಪ್ಪ



ಕೋಲಾರ ತಾಲ್ಲೂಕು, ಕೋನೇಪುರ ಗ್ರಾಮದ ದೊಡ್ಡವೆಂಕಟೇಶಪ್ಪ ಮತ್ತು ನಾರಾಯಣಮ್ಮ ದಂಪತಿಗಳ ಮಗನಾದ ಮುನಿಯಪ್ಪ ನವರು ಕಳೆದ ೨೫ ವರ್ಷಗಳಿಂದ ಶ್ರೀ ಒರಿಜಿನಲ್ ಮಾರುತಿ ಡ್ರಾಮಾ ಸೀನರಿ ಕಂಪನಿಯಲ್ಲಿ ಖಾಯಂ ವಸ್ತ್ರವಿನ್ಯಾಸಕರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

### ವಸ್ತ್ರ ವಿನ್ಯಾಸ ಮಾಡಿದ ನಾಟಕಗಳು

ಕುರುಕ್ಷೇತ್ರ, ರಾಮಾಯಣ, ಶನಿಮಹಾತ್ಮೆ, ರಾಜಾವಿಕ್ರಮ, ರಾಜಾ ಸತ್ಯವ್ರತ,ನಳ-ದಮಯಂತಿ, ರಾಜ ಪುರೋಹಿತ, ನಲ್ಲತಂಗ, ಅಥವಾ ಶನಿಪ್ರಭಾವ, ಸಾಮ್ರಾಟ್ ಸುಯೋಧನ, ಪ್ರಚಂಡ ಕೌರವೇಶ್ವರ, ಶ್ರೀಕೃಷ್ಣ ಸಂಧಾನ, ದ್ರೌಪತಿ ವಸ್ತ್ರಾಪಹರಣ, ಸತ್ಯ ಹರಿಶ್ಚಂದ್ರ, ಭಕ್ತ ಪ್ರಹ್ಲಾದ, ಕರಿಭಂಟನ ಕಾಳಗ, ಮೂರುವರೆ ವಜ್ರಗಳು, ತ್ರಿಜನ್ಮ ಮೋಕ್ಷ, ತ್ರಿಪುರ ಸಂಹಾರ, ದಾನವೀರ ಶೂರಕರ್ಣ, ವೀರ ಅಭಿಮನ್ಯು, ದ್ರೌಪತಿ ಸ್ವಯಂವರ, ಶ್ರೀಕೃಷ್ಣ ಗಾರಡಿ, ಶ್ರೀರಾಮ ಪಟ್ಟಾಭಿಷೇಕ ಮೊದಲಾದ ನಾಟಕಗಳಿಗೆ ವಸ್ತ್ರ ವಿನ್ಯಾಸ ಮಾಡಿದ್ದಾರೆ.

## ಶ್ರೀ ಎಂ. ತಂಗಲಪ್ಪ



ಕೋಲಾರ ತಾಲ್ಲೂಕು, ವಕ್ಕಲೇರಿ ಹೋಬಳಿ, ಅರಾಭಿಕೊತ್ತನೂರು ಅಂಚೆ, ಅರಾಭಿಕೊತ್ತನೂರು ಗ್ರಾಮದ ಸಿ. ಮುನಿಶಾಮಪ್ಪ ಮತ್ತು ಮುನಿಯಮ್ಮ ದಂಪತಿಗಳ ಮಗನಾದ ತಂಗಲಪ್ಪ ಕಳೆದ ೩೦ ವರ್ಷಗಳಿಂದ ವಸ್ತ್ರವಿನ್ಯಾಸಕರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ

**ವಸ್ತ್ರ ವಿನ್ಯಾಸ ಮಾಡಿದ ನಾಟಕಗಳು**

ಕುರುಕ್ಷೇತ್ರ, ಕರಿಭಂಟನ ಕಾಳಗ, ದ್ರೌಪತಿ ವಸ್ತ್ರಾಪಹರಣ, ಭಕ್ತಪ್ರಹ್ಲಾದ, ಸತ್ಯಹರಿಶ್ಚಂದ್ರ ಮತ್ತು ಮಾರ್ಕೇಂಡೇಯ ಚರಿತ್ರೆ ಮೊದಲಾದ ನಾಟಕಗಳಿಗೆ ವಸ್ತ್ರ ವಿನ್ಯಾಸ ಮಾಡಿದ್ದಾರೆ.

## ಶ್ರೀ ರಮೇಶ್



ಕೋಲಾರ ತಾಲ್ಲೂಕು, ವೇಮಗಲ್‌ಹೋಬಳಿ, ಮದ್ದೇರಿ ಅಂಚೆ, ಸೀತಪ್ಪನಹಳ್ಳಿ ಗ್ರಾಮದ ನಾರಾಯಣಪ್ಪ ಮತ್ತು ಗೌರಮ್ಮ ದಂಪತಿಗಳ ಮಗನಾದ ರಮೇಶ್‌ರವರು ಕಳೆದ ೧೦ ವರ್ಷಗಳಿಂದ ವಸ್ತ್ರವಿನ್ಯಾಸಕರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

**ವಸ್ತ್ರ ವಿನ್ಯಾಸ ಮಾಡಿದ ನಾಟಕಗಳು**

ರಾಜಾ ವಿಕ್ರಮ, ಕುರುಕ್ಷೇತ್ರ, ಸಂಪೂರ್ಣ ರಾಮಾಯಣ, ಗಯಚರಿತ್ರೆ ಮಾರ್ಕಂಡೇಯ ಚರಿತ್ರೆ, ನಾಟಕಗಳಿಗೆ ವಸ್ತ್ರ ವಿನ್ಯಾಸ ಮಾಡಿದ್ದಾರೆ.

## ಶ್ರೀ ವೆಂಕಟಸ್ವಾಮಿ



ಕೋಲಾರ ತಾಲ್ಲೂಕು, ಕಸಬಾ ಹೋಬಳಿ, ಕಲ್ಲಂಡೂರು ಗ್ರಾಮದ ಮುನಿವೆಂಕಟಪ್ಪ ಮತ್ತು ಶಾರದಮ್ಮ ದಂಪತಿಗಳ ಮಗನಾದ ವೆಂಕಟಸ್ವಾಮಿ ಯವರು ಕಳೆದ ೧೨ ವರ್ಷಗಳಿಂದ ಶ್ರೀ ಒರಿಜಿನಲ್ ಮಾರುತಿ ಡ್ರಾಮಾ ಸೀನರಿ ಕಂಪನಿಯಲ್ಲಿ

ಎಲೆಕ್ಟ್ರಿಷಿಯನ್ ಆಗಿ ವಿದ್ಯುತ್ ಮತ್ತು ಧ್ವನಿವರ್ಧಕ ವ್ಯವಸ್ಥೆಯ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

**ಎಲೆಕ್ಟ್ರಿಷಿಯನ್ ಆಗಿ ಸೇವೆ ಸಲ್ಲಿಸಿದ ನಾಟಕಗಳು**

ಕುರುಕ್ಷೇತ್ರ, ರಾಮಾಯಣ, ಶನಿಮಹಾತ್ಮೆ, ರಾಜಾವಿಕ್ರಮ, ರಾಜಾ ಸತ್ಯವ್ರತ, ನಳ-ದಮಯಂತಿ, ರಾಜ ಪುರೋಹಿತ, ನಲ್ಲತಂಗ ಅಥವಾ ಶನಿಪ್ರಭಾವ, ಸಾಮ್ರಾಟ್ ಸುಯೋಧನ, ಪ್ರಚಂಡ ಕೌರವೇಶ್ವರ, ಶ್ರೀಕೃಷ್ಣ ಸಂಧಾನ, ದ್ರೌಪತಿ ವಸ್ತ್ರಾಪಹರಣ, ಸತ್ಯಹರಿಶ್ಚಂದ್ರ, ಭಕ್ತಪ್ರಹ್ಲಾದ, ಕರಿಭಂಟನ ಕಾಳಗ, ಮೂರುವರೆ ವಜ್ರಗಳು, ತ್ರಿಜನ್ಮ ಮೋಕ್ಷ, ತ್ರಿಪುರ ಸಂಹಾರ, ದಾನವೀರ ಶೂರಕರ್ಣ, ವೀರ ಅಭಿಮನ್ಯು, ದ್ರೌಪತಿ ಸ್ವಯಂವರ, ಶ್ರೀಕೃಷ್ಣಗಾರಡಿ , ಶ್ರೀರಾಮ ಪಟ್ಟಾಭಿಷೇಕ ಮೊದಲಾದ ನಾಟಕಗಳಿಗೆ ಎಲೆಕ್ಟ್ರಿಷಯನ್ ಆಗಿ ಸೇವೆ ಯನ್ನು ಸಲ್ಲಿಸಿದ್ದಾರೆ.

## ಶ್ರೀಮತಿ ನಾರಾಯಣಮ್ಮ



ಕೋಲಾರ ತಾಲ್ಲೂಕು, ವೇಮಗಲ್ ಹೋಬಳಿ, ಮಲಿಯಪ್ಪನಹಳ್ಳಿಯಲ್ಲಿ ವಾಸವಾಗಿರುವ ಶ್ರೀಮತಿ ನಾರಾಯಣಮ್ಮನವರು ಕಳೆದ ಹತ್ತು ವರ್ಷಗಳಿಂದಲೂ "ರಂಗಭೂಷಣ ವಸ್ತ್ರಾಲಂಕಾರ" ಸಂಸ್ಥೆಯನ್ನು ಸ್ಥಾಪಿಸಿ ವಿಶ್ವಸಾಂಸ್ಕೃತಿಕ ಮತ್ತು ಸಾಮಾಜಿಕ ಅಭಿವೃದ್ಧಿ ಸಂಸ್ಥೆ ಮತ್ತು ರಂಗಚೇತನ ಯುವಕರ ಸಂಘ, ರತ್ನಾವಳಿ ನಾಟ್ಯ ಕ್ರೀಡಾ ಮತ್ತು ಸಾಮಾಜಿಕ ಅಭಿವೃದ್ಧಿ ಸಂಸ್ಥೆಯ ನಾಟಕಗಳಲ್ಲಿ ಖಾಯಂ ವಸ್ತ್ರವಿನ್ಯಾಸಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

**ವಸ್ತ್ರವಿನ್ಯಾಸ ಮಾಡಿದ ನಾಟಕಗಳು**

ಲವ_ಕುಶ, ಹೆಣ್ಣು ವರವೋ...! ಶಾಪವೋ...?, ಸಂಗೊಳ್ಳಿ ರಾಯಣ್ಣ, ಪರ್ಣಕುಟೀರದ ಪುತ್ರರು, ಭೀಮಾ-ಘಟೋತ್ಕಚರ ಕಾಳಗ, ಶಸ್ತ್ರ ಸನ್ಯಾಸ, ಪ್ರಚಂಡ ರಾವಣ, ಕುರುಕ್ಷೇತ್ರ, ರಾಜಾ ಸತ್ಯವ್ರತ ಮೊದಲಾದ ನಾಟಕಗಳಿಗೆ ಇವರು ವಸ್ತ್ರವಿನ್ಯಾಸ ಮಾಡಿದ್ದಾರೆ.

## ಶ್ರೀಮತಿ ಯಶೋಧ



ಕೋಲಾರ ತಾಲ್ಲೂಕು ವೇಮಗಲ್ ಹೋಬಳಿಯ ಮಲಿಯಪ್ಪನಹಳ್ಳಿ ಗ್ರಾಮದ ಸಿ. ಆಂಜಿನಪ್ಪನವರ ಧರ್ಮಪತ್ನಿಯಾದ ಶ್ರೀಮತಿ ಯಶೋಧಮ್ಮನವರು ಕಳೆದ ಹತ್ತು ವರ್ಷಗಳಿಂದಲೂ ವಿಶ್ವಸಾಂಸ್ಕೃತಿಕ ಮತ್ತು ಸಾಮಾಜಿಕ ಅಭಿವೃದ್ಧಿ ಸಂಸ್ಥೆ ಮತ್ತು ರಂಗಚೇತನ ಯುವಕರ ಸಂಘದ ನಾಟಕಗಳಲ್ಲಿ ವಸ್ತ್ರವಿನ್ಯಾಸದ ಸಹಾಯಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

**ಸಹಾಯಕಿಯಾಗಿ ವಸ್ತ್ರವಿನ್ಯಾಸ ಮಾಡಿದ ನಾಟಕಗಳು**

ಲವ_ಕುಶ, ಹೆಣ್ಣುವರವೋ...! ಶಾಪವೋ...?, ಸಂಗೊಳ್ಳಿ ರಾಯಣ್ಣ, ಪರ್ಣಕುಟೀರದ ಪುತ್ರರು, ಭೀಮಾ–ಘಟೋತ್ಕಚರ ಕಾಳಗ, ಶಸ್ತ್ರ ಸನ್ಯಾಸ, ಪ್ರಚಂಡ ರಾವಣ, ಕುರುಕ್ಷೇತ್ರ, ರಾಜಾ ಸತ್ಯವ್ರತ ಮೊದಲಾದ ನಾಟಕಗಳಿಗೆ ಇವರು ವಸ್ತ್ರವಿನ್ಯಾಸವನ್ನು ಮಾಡಿದ್ದಾರೆ.

# ಬೆಳಕು

## ಶ್ರೀ ಕಾರ್ತಿಕ್



ಕೋಲಾರ ತಾಲ್ಲೂಕು ಹೋಳೂರು ಹೋಬಳಿ ಮುದುವಾಡಿ ಅಂಚೆ ಕೊಂಡೇನಹಳ್ಳಿ ಗ್ರಾಮದ ರಾಮಪ್ಪ ಮತ್ತು ಮಂಜುಳಮ್ಮನವರ ಮಗನಾದ ಕಾರ್ತಿಕ್ ಎಂಟು ವರ್ಷಗಳಿಂದಲೂ ವಿಶ್ವಸಾಂಸ್ಕೃತಿಕ ಮತ್ತು ಸಾಮಾಜಿಕ ಅಭಿವೃದ್ಧಿ ಸಂಸ್ಥೆ ಮತ್ತು ರಂಗಚೇತನ ಯುವಕರ ಸಂಘದ ನಾಟಕಗಳಲ್ಲಿ ಬೆಳಕು ವಿನ್ಯಾಸಕಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

## ಪ್ರಸಾಧನ

### ಶ್ರೀಮತಿ ಸುನಂದ ಕೆ.ಎ.



ಕೋಲಾರ ತಾಲ್ಲೂಕು ವೇಮಗಲ್ ಹೋಬಳಿ ಕುರುಗಲ್ ಅಂಚೆ ಮಲಿಯಪ್ಪನಹಳ್ಳಿ ಗ್ರಾಮದ ಎಂ. ಸಿ. ವಿಶ್ವನಾಥರವರ ಧರ್ಮಪತ್ನಿಯಾದ ಶ್ರೀಮತಿ ಸುನಂದ ಕೆ.ಎ. ರವರು ಕಳೆದ ಎಂಟು ವರ್ಷಳಿಂದಲೂ ವಿಶ್ವಸಾಂಸ್ಕೃತಿಕ ಮತ್ತು ಸಾಮಾಜಿಕ ಅಭಿವೃದ್ಧಿ ಸಂಸ್ಥೆ ಮತ್ತು ರಂಗಚೇತನ ಯುವಕರ ಸಂಘದ ನಾಟಕಗಳಲ್ಲಿ ಪ್ರಸಾಧನಕಲಾವಿದೆಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

### ಶ್ರೀ ಎಂ.ರಮೇಶ



ಪಿ.ಮುನಿರೆಡ್ಡಿ ಮತ್ತು ಅಕ್ಕಲಮ್ಮ ದಂಪತಿಗಳ ಮಗನಾಗಿ ಕೋಲಾರ ತಾಲೂಕಿನ ವೇಮಗಲ್ ಹೋಬಳಿ ಮದ್ದೇರಿ ಗ್ರಾಮದಲ್ಲಿ ಜನಿಸಿದವರು. ಕಳೆದ ೧೫ ವರ್ಷಗಳಿಂದಲೂ ನಾಟಕಗಳಲ್ಲಿ ಪ್ರಸಾಧನ ಕಲಾವಿದನಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸಂಧಾನ,ಗಧಾಯುದ್ದ, ಕರಿಭಂಟನ ಕಾಳಗ, ವಿಷಜ್ವಾಲೆ, ಕೃಷ್ಣಲೀಲಾ, ಮೊದಲಾದ ನಾಟಕಗಳಿಗೆ ಪ್ರಸಾದನ ಮಾಡಿದ್ದಾರೆ.

## ಹಾರ್ಮೋನಿಯಂ ವಾದಕರು



### ಶ್ರೀ ಅಂಗಡಿ ವೆಂಕಟೇಶಪ್ಪ

ಮುನಿಸೊಣ್ಣಪ್ಪ ಮತ್ತು ಚೌಡಮ್ಮ ಎಂಬ ದಂಪತಿಗಳ ಮಗನಾಗಿ ಕೋಲಾರ ತಾಲೂಕಿನ ಸುಗಟೂರು ಹೋಬಳಿಯ ಅಂಕತಟ್ಟಿ ಗ್ರಾಮದಲ್ಲಿ ಜನಿಸಿದ ಅಂಗಡಿ ವೆಂಕಟೇಶಪ್ಪ ನವರು ೭ನೇ ತರಗತಿಯಲ್ಲಿಯೇ ರಂಗಾಸಕ್ತಿಯನ್ನು ಮೈಗೂಡಿಸಿ ಕೊಂಡವರು.

**ಹಾರ್ಮೋನಿಯಂ ನುಡಿಸಿದ ನಾಟಕಗಳು**

ಶ್ರೀಕೃಷ್ಣಾರ್ಜುನರ ಯುದ್ಧ,ದಾನವೀರಶೂರ ಕರ್ಣ,ಮತ್ತು ಶ್ರೀಕೃಷ್ಣರಾಯಭಾರ, ನಾಟಕಗಳಲ್ಲಿ ಹಾರ್ಮೋನಿಯಂ ನುಡಿಸಿ ತನ್ನ ಪ್ರತಿಭೆಯನ್ನು ಮೆರೆಸಿದ್ದಾರೆ. ಪ್ರಸ್ತುತದಲ್ಲಿ ಹಾರ್ಮೋನಿಯಂ ವಾದನಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಿದ್ದಾರೆ.

## ಶ್ರೀ ನಂಜುಡಪ್ಪ




ಚನ್ನವೀರಪ್ಪ ಮತ್ತು ಮುನಿಯಮ್ಮ ಎಂಬ ದಂಪತಿಗಳ ಮಗನಾಗಿ ಕೋಲಾರ ತಾಲೂಕು, ವಕ್ಕಲೇರಿ ಹೋಬಳಿಯ ಅರಾಭಿಕೊತ್ತನೂರು ಅಂಚೆ, ಅರಾಭಿಕೊತ್ತನೂರು ಗ್ರಾಮದಲ್ಲಿ ಜನಿಸಿದ ಸಿ.ನಂಜುಡಪ್ಪ ನವರು ಕಳೆದ ೪೫ ವರ್ಷಗಳಿಂದ ಹಾರ್ಮೋನಿಯಂ ವಾದಕರಾಗಿ ರಂಗಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ.

**ಹಾರ್ಮೋನಿಯಂ ನುಡಿಸಿದ ನಾಟಕಗಳು**

ಅಭಿನಯದ ಜೊತೆಗೆ ರಂಗ ಸಂಗೀತ ಕ್ಷೇತ್ರಕ್ಕೆ ಕೊಡುಗೆಯನ್ನು ನೀಡುವ ದೆಸೆಯಲ್ಲಿ ಯಕ್ಷಗಾನ, ಹರಿಕಥೆ, ನಾಟಕಗಳಿಗೆ ಹಾರ್ಮೋನಿಯಂ ನುಡಿಸಿ ತನ್ನ ಪ್ರತಿಭೆಯನ್ನು ಮೆರೆಸಿದ್ದಾರೆ. ಪ್ರಸ್ತುತದಲ್ಲಿ ಹಾರ್ಮೋನಿಯಂ ವಾದನಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಿದ್ದಾರೆ.

## ಶ್ರೀ ಜಯಪ್ರಕಾಶ್



ಕೋಲಾರ ತಾಲ್ಲೂಕು ವೇಮಗಲ್ ಹೋಬಳಿಯ ಬೈರಂಡಹಳ್ಳಿ ಗ್ರಾಮದ ಚಿಕ್ಕತಿಮ್ಮಯ್ಯ ಮತ್ತು ಮುನಿಯಮ್ಮ ದಂಪತಿಯ ಮಗನಾದ ಜಯಪ್ರಕಾಶ್ ಕಳೆದ ಹದಿನೈದು ವರ್ಷಗಳಿಂದಲೂ ಹಾರ್ಮೋನಿಯಂ ವಾದಕರಾಗಿ ರಂಗಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ದಾನ ವೀರ ಶೂರ ಕರ್ಣ, ಮೂರುವರೆ ವಜ್ರಗಳು, ಕೃಷ್ಣಾ-ಅರ್ಜುನ ಯುದ್ಧ, ರಾಜಾ ಸತ್ಯವ್ರತ, ಕುರುಕ್ಷೇತ್ರ ಮತ್ತು ಪ್ರಚಂಡರಾವಣ ನಾಟಕಗಳಿಗೆ ಹಾರ್ಮೋನಿಯಂ ನುಡಿಸಿದ್ದಾರೆ.

# ತಬಲ ವಾದಕರು

## ಶ್ರೀ ಸಿ. ನಾರಾಯಣಸ್ವಾಮಿ



ಕೋಲಾರ ತಾಲ್ಲೂಕು ವೇಮಗಲ್ ಹೋಬಳಿಯ ಬೈರಂಡಹಳ್ಳಿ ಗ್ರಾಮದ ಪಿಳ್ಳಪ್ಪ ಹಾಗೂ ಬೋಶಮ್ಮ ದಂಪತಿಯ ಮಗನಾದ ಸಿ. ನಾರಾಯಣಸ್ವಾಮಿ ಇಪ್ಪತ್ತು ವರ್ಷಗಳಿಂದಲೂ ತಬಲ ವಾದಕರಾಗಿ ರಂಗಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ.

**ತಬಲ ನುಡಿಸಿದ ನಾಟಕಗಳು :**

ರಾಜಾ ಸತ್ಯವ್ರತ, ಕುರುಕ್ಷೇತ್ರ, ಭೀಮ-ಘಟೋತ್ಕಚರ ಕಾಳಗ, ಪ್ರಚಂಡರಾವಣ, ದಾನ ವೀರ ಶೂರ ಕರ್ಣ, ಮೂರುವರೆ ವಜ್ರಗಳು, ಕೃಷ್ಣಾ-ಅರ್ಜುನ ಯುದ್ಧ ನಾಟಕಗಳಿಗೆ ತಬಲ ನುಡಿಸಿದ್ದಾರೆ.

## ಶ್ರೀ ಮುನಿದಾಸಪ್ಪ



ಕೋಲಾರ ತಾಲ್ಲೂಕು, ನರಸಾಪುರ ಹೋಬಳಿ, ಚಾಕಸರಹಳ್ಳಿ ಅಂಚೆ, ಲಕ್ಷ್ಮೀಸಾಗರ ಗ್ರಾಮದ ಚಿಕ್ಕೋನಪ್ಪ ಮತ್ತು ಮುನಿಯಮ್ಮ ದಂಪತಿಗಳ ಮಗನಾದ ಮುನಿದಾಸಪ್ಪ ೧೫ ವರ್ಷದಿಂದ ರಂಗಭೂಮಿಯಲ್ಲಿ ಘಟಂವಾದಕರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

**ಘಟಂ ನುಡಿಸಿರುವ ನಾಟಕಗಳು**

ಸತ್ಯಹರಿಶ್ಚಂದ್ರ, ರಾಜಾ ಸತ್ಯವ್ರತ ಮತ್ತು ರಾಜಾ ವಿಕ್ರಮ ಮೊದಲಾದ ನಾಟಕಗಳಲ್ಲಿ ಘಟಂವಾದಕರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

## ಶ್ರೀ ರಾಮಚಂದ್ರಪ್ಪ




ಕೋಲಾರ ತಾಲ್ಲೂಕು ವಕ್ಕಲೇರಿ ಹೋಬಳಿ, ಅರಾಭಿಕೊತ್ತನೂರು ಅಂಚೆ, ಅರಾಭಿಕೊತ್ತನೂರು ಗ್ರಾಮದ ನೆಲ್ಲೊಟ್ಟಿ ಮುನಿಯಪ್ಪ ಮತ್ತು ಮುನಿಯಮ್ಮ ದಂಪತಿಗಳ ಮಗನಾದ ರಾಮಚಂದ್ರಪ್ಪ ೪೦ ವರ್ಷದಿಂದ ರಂಗಭೂಮಿಯಲ್ಲಿ ತಬಲ ವಾದಕರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

**ತಬಲ ನುಡಿಸಿರುವ ನಾಟಕಗಳು**

ರಾಜಾ ಸತ್ಯವ್ರತ, ಕರಿಭಂಟನ ಕಾಳಗ, ದ್ರೌಪದಿ ವಸ್ತ್ರಾಭರಣ ಮತ್ತು ಗಯಚರಿತ್ರೆ ಮೊದಲಾದ ನಾಟಕಗಳಲ್ಲಿ ತಬಲ ವಾದಕರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

## ಶ್ರೀ ಮುನಿಗಂಗಪ್ಪ



ಕೋಲಾರ ತಾಲ್ಲೂಕು, ವೇಮಗಲ್ ಹೋಬಳಿ, ಮದ್ದೇರಿ ಅಂಚೆ, ಸೀತಪ್ಪನಹಳ್ಳಿ ಗ್ರಾಮದ ದೊಡ್ಡಮುನಿಯಪ್ಪ ಮತ್ತು ನಾರೆಮ್ಮ ದಂಪತಿಗಳ ಮಗನಾದ ಮುನಿಗಂಗಪ್ಪ ೨೫ ವರ್ಷದಿಂದ ರಂಗಭೂಮಿಯಲ್ಲಿ ತಬಲ ವಾದಕರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

**ತಬಲ ನುಡಿಸಿರುವ ನಾಟಕಗಳು**

ರಾಜಾ ಸತ್ಯವ್ರತ, ಕರಿಭಂಟನ ಕಾಳಗ, ದ್ರೌಪದಿ ವಸ್ತ್ರಾಭರಣ, ಗಯಚರಿತ್ರೆ ಮೊದಲಾದ ನಾಟಕಗಳಲ್ಲಿ ತಬಲ ವಾದಕರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ.



## ಶ್ರೀ ವೆಂಕಟೇಶಪ್ಪ

ಕೋಲಾರ ತಾಲ್ಲೂಕು, ವೇಮಗಲ್ ಹೋಬಳಿ, ಮದ್ದೇರಿ ಅಂಚೆ, ಸೀತಪ್ಪನಹಳ್ಳಿ ಗ್ರಾಮದ ನಾರಾಯಣಪ್ಪ ಮತ್ತು ಸಿದ್ದಮ್ಮ ದಂಪತಿಗಳ ಮಗನಾದ ವೆಂಕಟೇಶಪ್ಪ ೨೫ ವರ್ಷದಿಂದ ರಂಗಭೂಮಿಯಲ್ಲಿ ತಬಲ ವಾದಕರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

### ತಬಲ ವಾದಿಸಿರುವ ನಾಟಕಗಳು

ರಾಜಾ ಸತ್ಯವ್ರತ, ಕರಿಭಂಟನ ಕಾಳಗ, ದ್ರೌಪತಿ ವಸ್ತ್ರಾಭರಣ ಮತ್ತು ಗಯಚರಿತ್ರೆ ಮೊದಲಾದ ನಾಟಕಗಳಲ್ಲಿ ತಬಲ ವಾದಕರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

## ರಂಗಸಜ್ಜಿಕೆಯನ್ನು ಹೊಂದಿರುವ ಸಂಘ–ಸಂಸ್ಥೆಗಳು

### ಶ್ರೀ ಮಾರುತಿ ಡ್ರಾಮ ಸೀನ್ಸ್ ಮತ್ತು ಡ್ರೆಸ್ ಸಪ್ಲೆಯರ್ಸ್

ಕೋಲಾರ ತಾಲ್ಲೂಕು. ನರಸಾಪುರ ಹೋಬಳಿ ಚುಂಚದೇನಹಳ್ಳಿ, ಗ್ರಾಮದಲ್ಲಿರುವ ಶ್ರೀ ಮಾರುತಿ ಡ್ರಾಮ ಸೀನ್ಸ್ ಮತ್ತು ಡ್ರೆಸ್ ಸಪ್ಲೆಯರ್ಸ್ ಸಂಸ್ಥೆಯು ವಸ್ತ್ರಾಭರಣ ಹಾಗೂ ಪ್ರಸಾಧನ ಕಲಾವಿದರನ್ನು, ನೇಪಥ್ಯಗಾರರನ್ನು, ಹೊಂದಿ ಕಳೆದ ಎರಡ್ಮೂರು ದಶಕಗಳಿಂದಲೂ ಅನೇಕ ನಾಟಕ ತಂಡಗಳಿಗೆ ಉತ್ತಮ ರಂಗಸಜ್ಜಿಕೆಯನ್ನು ಒದಗಿಸುತ್ತಾ ಬಂದಿದೆ. ಇದರ ಮಾಲೀಕರಾದ ಸಿ.ಆರ್.ಚಿನ್ನಪ್ಪನವರು ಮತ್ತು ಮಕ್ಕಳು ಕಂಪನಿಯನ್ನು ನಡೆಸುತ್ತಾ ಬಂದಿದ್ದಾರೆ.

### ವಿಶೇಷ ಪ್ರದರ್ಶನಗಳು

